ಜಾಯ್ಸ

ಹ.ವೆಂ.ವೇಣುಗೋಪಾಲ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನೆಮಾಲೆ

ಮಲ್ಲಿಕ್ ಮಹಮ್ಮದ್ ಜಾಯಸಿ

ಹ. ವೆಂ. ವೇಣುಗೋಪಾಲ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨

MALLIK MAHAMMAD JAYASI
Written by H. V. Venugopala
and Published by Karnataka Sahitya Akademy,
Nrupatunga Road, Bangalore-560002.

First Publication 1994 Pages : viii+52

ಹಕ್ಕುಗಳು : ಲೇಖಕರವು

ಮೊದಲನೇ ಮುದ್ರಣ ೧೯೯೪

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುಖಪುಟ ವಿನ್ಯಾಸ :

. ಚಂದ್ರಶೇಖರ್

ಬೆಲೆ : ಎರಡು ರೂಪಾಯಿ

ಮುದ್ರಕರು :

ಶ್ರೀ ಮುದ್ರಣ
. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಶಾನವೀಯುತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರಂಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆ ಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪ — ಬರಗೂರು ರಾಮಚಂದ್ರಪ್ಪ
ಬೆಂಗಳೂರು — ಅಧ್ಯಕ್ಷರು

ಲೇಖಕರ ಮಾತು

ನಮ್ಮ ಸಂಸ್ಕೃತಿಯ ಜೀವಂತಿಕೆ ಮತ್ತು ವೈವಿಧ್ಯತೆಗೆ ತಮ್ಮ ್ರಿಯೆ ಮತ್ತು ಕೃತಿಗಳ ಮೂಲಕ ಅಮೂಲ್ಯ ಕೊಡುಗೆಯನ್ನಿತ್ತ ಮಾಜ ಸುಧಾರಕರುಗಳ ಬಗ್ಗೆ ಕಿರು ಹೊತ್ತಗೆಗಳನ್ನು ಪ್ರಕಟಿಸಲು ರ್ನಾಟಕ ಸಾಹಿತ್ಯ ಅಕಾಡೆಮಿ 'ಸಾಮಾಜಿಕ ಚಿಂತನ ಮಾಲೆ' ಎಂಬ ್ರಕಟಣಾಕಾರ್ಯವನ್ನು ನಿರೂಪಿಸಿಕೊಂಡಿರುವುದು ಸ್ತುತ್ಯಾರ್ಹವೇ ಾಗಿದೆ.

ಈ 'ಸಾಮಾಜಿಕ ಚಿಂತನ ಮಾಲೆ' ಯಲ್ಲಿ ಕರ್ನಾಟಕ ಸಾಹಿತ್ಯ ಕಾಡೆಮಿಯವರು, ಅವಧೀ ಭಾಷೆಯ ಪ್ರಮುಖ ಸೂಫೀ ಸಂತರಾದ ಲ್ಲಿಕ್ ಮುಹಮ್ಮದ್ ಜಾಯಸಿಯವರನ್ನು ಮತ್ತು ಅವರ ಕಾವ್ಯ ಳನ್ನು ಕುರಿತು ಕಿರು ಹೊತ್ತಿಗೆಯೊಂದನ್ನು ಸಿದ್ಧಪಡಿಸುವ ಕೆಲಸವನ್ನು ನಗೆ ವಹಿಸಿದ್ದರು. ಈ ಕೆಲಸವನ್ನು ನನಗೇ ವಹಿಸಿದ ಅಕಾಡೆಮಿಯ ಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪನವರಿಗೆ ಸದಾ ಋಣಿ. ಹೊತ್ತಗೆ ಸಿದ್ಧಪಡಿಸುವ ಕಾಲಕ್ಕೆ ಸಾಂಸ್ಕೃತಿಕ ಚರ್ಚೆಯ ಪ್ರಮುಖ ಂಶಗಳನ್ನು ತಿಳಿಸಿಕೊಟ್ಟ ಶ್ರೀ ಪಿ. ಗಂಗಾಧರಮೂರ್ತಿಯವರು, ್ರೀ ರಂಗಾರೆಡ್ಡಿ ಕೋಡಿರಾಂಪುರ ಅವರುಗಳನ್ನು ನೆನೆಯದೆ ಇರಲಾರೆ.

ಕೆಲವು ಅಮೂಲ್ಯ ಗ್ರಂಥಗಳನ್ನು ಒದಗಿಸಿಕೊಟ್ಟ ಶ್ರೀ ಜಿ.ಕೆ. ಗೋವಿಂದ
ರಾವ್ ಅವರು, ಶ್ರೀ ಹೆಚ್. ವಿ. ಶ್ರೀಧರ್ ಅವರಿಗೂ ನಾನು ಋಣಿ.
ಇದೇ ಕೆಲಸದ ಕೆಲವು ಪ್ರಮುಖ ಘಟ್ಟಗಳಲ್ಲಿ ನನಗೆ ನೆರವಾಗಿದ್ದ ನನ್ನ
ಪತ್ನಿ ಕೆ. ಸುಕನ್ಯಾಳಿಗೂ ನಾನು ಋಣಿ.

ಗೌರಿಬಿದನೂರು.

—ಹ. ನಂ. ವೇಣುಗೋಪಾಲ

ಮಲ್ಲಿಕ್ ಮಹಮದ್ ಜಾಯಸಿ

ಅಧ್ಯಾಯ ೧

ಹಿಂದೀ ಸಾಹಿತ್ಯ ಸಂದರ್ಭ

"ಏಕ್ ಬಿಂದಾ ತೆಂ ಬಿಸ್ವ ರಚ್ಯೋಹೈ,
ಕೋ ಬಾಹ್ಮನ್ ಕೋ ಸೂದಾ ? !"
—ಕಬೀರ್

(ಒಂದು ಬಿಂದುವಿನಿಂದ ಇಡೀ ವಿಶ್ವ ರಚನೆಯಾಗಿದೆ, ಇಲ್ಲಿ ಬ್ರಾಹ್ಮಣ ಯಾರು ಶೂದ್ರ ಯಾರು ? —ಕಬೀರ್)

ಇಂದು ಸುಮಾರು ಇಪ್ಪತ್ತೈದು ಕೋಟಿ ಭಾರತದ ಜನಗಳು ಆಡುವ ಭಾಷೆ ಹಿಂದೀ. ಉತ್ತರ ಭಾರತದಲ್ಲಿನ ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಾಸ್ಥಾನ, ದೆಹಲಿ, ಹಿಮಾಚಲ ಪ್ರದೇಶ, ಪೂರ್ವ ಪಂಜಾಬ್ ಮುಂತಾದ ರಾಜ್ಯಗಳ ಸುಮಾರು ಆರುಲಕ್ಷ ಚದರ ಮೈಲುಗಳಲ್ಲಿ ಈ ಭಾಷೆ ಹರಡಿಕೊಂಡಿದೆ. ಹೆಚ್ಚೂ ಕಮ್ಮಿ ಭಾಗಲ್ ಪುರದವರೆಗಿನ ಗಂಗಾನದಿಯ ಪ್ರವಾಹ ಭೂಮಿಯನ್ನು ಹಿಂದೀ ಸ್ಥಾನ ಎಂದು ಹೇಳಬಹುದು.

ಹಿಂದೀಗೆ ಸಾಹಿತ್ಯ ಸಹಾಯಕವಾಗುವ ಹನ್ನೆರಡು ಪ್ರತ್ಯೇಕ ಪ್ರಾಂತ ಭಾಷೆಗಳಿವೆ. ಎಲ್ಲ ಪ್ರಾಂತೀಯ ಅಪಭ್ರಂಶ[೧]ಗಳಲ್ಲೂ ಜಾನ

೧. ಪ್ರಾಕೃತ ಭಾಷೆಯು ಆಧುನಿಕ ಭಾಷೆಗಳ ರೂಪಕ್ಕೆ ಪರಿವರ್ತಿತವಾಗುವುದಕ್ಕೆ ಹಿಂದೆ ಇದ್ದ ರೂಪಕ್ಕೆ ಅಪಭ್ರಂಶವೆಂದು ಹೆಸರು.

ಪದ ಸಾಹಿತ್ಯ ವಿಪುಲವಾಗಿವೆ. ಇವುಗಳಲ್ಲಿ ಬಹಳಷ್ಟು ಭಾಷೆಗಳು ಮಧ್ಯಕಾಲದಲ್ಲಿ೧ ಕಾವ್ಯ ಭಾಷೆಗಳಾಗಿ ಪರಿವರ್ತಿತವಾಗಿ ಉತ್ತಮ ಸಾಹಿತ್ಯ ನಿರ್ಮಾಣಕ್ಕೆ ಸಹಾಯಕವಾಗಿವೆ. ಹಿಂದಿ ಎಂದು ವ್ಯವಹರಿಸುವಾಗ ಸಾಮಾನ್ಯವಾಗಿ ಈ ಎಲ್ಲ ವ್ಯಾವಹಾರಿಕ ಮತ್ತು ಕಾವ್ಯ ಭಾಷಾ ಪ್ರಭೇದಗಳನ್ನು ಗಮನಲ್ಲಿಟ್ಟುಕೊಳ್ಳಲಾಗುತ್ತದೆ. ಅವುಗಳಲ್ಲಿ ಕಾವ್ಯದೃಷ್ಟಿಯಿಂದ ಶೌರಸೇನೀ ಪ್ರಾಕೃತದಿಂದ ವಿಕಸಿತವಾದ ಬ್ರಜ ಭಾಷೆ, ಶೌರಸೇನೀ ಮತ್ತು ಪೈಶಾಚೀ ಭಾಷೆಯ ಪ್ರಭಾವದಿಂದ ಬೆಳೆದಿರುವ ಖಡೀಬೋಲಿ, ಶೌರಸೇನೀ ಮತ್ತು ಮಾಗಧೀ ವಿಶೇಷತೆಗಳನ್ನು ಪ್ರತಿಬಿಂಬಿಸುವ ಅವಧೀ ಮತ್ತು ಮಾಗಧೀಯ ವಿಕಸಿತ ರೂಪವಾದ ಮೈಥಿಲಿ ಇವುಗಳು ಮುಖ್ಯವಾದವು.

ಆದಿಕಾಲದ ಹಿಂದೀ ಭಾಷಾ ಸಾಹಿತ್ಯವನ್ನು ನಾಥ ಸಾಹಿತ್ಯ ಮತ್ತು ಚಾರಣ ಸಾಹಿತ್ಯ ಎಂಬ ಎರಡು ವಿಧಗಳಲ್ಲಿ ಗುರುತಿಸಲಾಗುತ್ತದೆ. ನಾಥ ಸಂಪ್ರದಾಯದ ಸಾಧಾರಣೆಯ ಗುರಿ ಇರುವ ಉಪದೇಶಗಳು ನಾಥ ಸಾಹಿತ್ಯದವುಗಳಾದರೆ, ಚಾರಣರು, ಭಟ್ಟರು, ಸೇವಕರು ಮತ್ತು ಪಂಚೋಳಿಗಳು ತಮ್ಮ ಆಶ್ರಯದಾತರನ್ನು ಕುರಿತು ರಚಿಸಿದ ವೃಗಾಥಗಳು ಚಾರಣಗೀತೆಗಳು. ಇವುಗಳನ್ನು ರಾಸೋ ಕಾವ್ಯ ಎಂದೂ ಕರೆಯುತ್ತಾರೆ. ಚಂದ್ ಬರ್ದಾಯಿಯ 'ಪೃಥ್ವಿರಾಜ ರಾಸೋ' ಒಂದು ಪ್ರಮುಖವಾದ ಗ್ರಂಥ.

ನಂತರದಲ್ಲಿ ವೀರ ರಸ ಪ್ರಧಾನವಾದ ಮುಲ್ಲಾದಾವೂದ್, ಅಮೀರ್ ಖುಸ್ರು ಅವರ ಕಾವ್ಯಗಳು ವೀರಗಾಥಾ ಯುಗದ ಕಾವ್ಯಗಳೆಂದು ಕರೆಯಿಸಿಕೊಂಡವು. ಸುಮಾರು ಹದಿನೈದನೆಯ ಶತಮಾನದ ವೇಳೆಗೆ ಭಾರತದಲ್ಲಿ ಮುಸಲ್ಮಾನರ ಪ್ರಾಬಲ್ಯ ಹೆಚ್ಚಿ, ಹಿಂದೂ ರಾಜರುಗಳಿಗೆ ಅವರನ್ನು ಗೆಲ್ಲಲು ದುಸ್ಸಾಧ್ಯವಾದಾಗ ಧಾರ್ಮಿಕ ಜಾಗೃತಿ

---

೧. ಹಿಂದೀ ಸಾಹಿತ್ಯದ ಮಧ್ಯಕಾಲ ಕ್ರಿ. ಶ. ೧೦ರಿಂದ ೧೫ನೆಯ ಶತಮಾನ.

ಉಂಟಾಯಿತು. ಶಾಂತಿ ಸೌಹಾರ್ದತೆಯ ಅವಶ್ಯಕತೆ ಕಾಣಿಸಿತು. ಈ ದಿಕ್ಕಿನಲ್ಲಿ ಕವಿಗಳೂ ಸಾಧುಸಂತರೂ ಬಹುವಾಗಿ ಶ್ರಮಿಸಿದರು. ಸಗುಣ ಮತ್ತು ನಿರ್ಗುಣ ಆರಾಧಕ ಪಂಥಗಳನ್ನು ಸ್ಥಾಪಿಸಿ, ವೇದಾಂತ ತತ್ವ ಗಳನ್ನು, ದೇಹದ ಅನಿತ್ಯತೆಯನ್ನು, ದೈವೋಪಾಸನೆಯನ್ನು, ಮಾಯಾ ಪ್ರಾಬಲ್ಯವನ್ನು, ಭಕ್ತಿಯ ಪ್ರಾಮುಖ್ಯತೆಯನ್ನು ಹೃದಯ ಶುದ್ಧಿಯ ಅವಶ್ಯಕತೆಯನ್ನು ಪ್ರೇಮ ಸಾಧನೆಯ ಕಠಿಣತೆ ಮುಂತಾದ ಜೀವನ ಮೌಲ್ಯಗಳನ್ನು ಜನ ಸಾಮಾನ್ಯರಲ್ಲಿ ಬೆಳೆಸಿದರು. ಇನ್ನೊಂದು ರೀತಿಯಲ್ಲಿ, ಈ ಸಾಮಾಜಿಕ ಜಾಗೃತಿ, ಭಾಷಾ ಸಾಹಿತ್ಯಗಳ ಅಭಿ ವೃದ್ಧಿಗೆ ಸಹಾಯವಾಯಿತು. ಈ ಕಾಲವನ್ನೇ ಭಕ್ತಿ ಕಾಲ ಎಂದು ಕರೆಯುತ್ತೇವೆ.

ಇದೇ ಕಾಲದಲ್ಲಿ ಉತ್ತರ ಭಾರತದಲ್ಲಿ ಧಾರ್ಮಿಕ ಪುನರು ದ್ಧಾರಕ್ಕೆ ವಿಶೇಷ ಪ್ರೇರಣೆಯನ್ನುಂಟುಮಾಡಿದವರು ರಮಾನಂದರು. ಇವರು ಸಾಹಿತ್ಯ ರಚನೆಯಲ್ಲಿ ತೊಡಗಿಕೊಳ್ಳದಿರುವುದರಿಂದ ಕಾವ್ಯ ಪ್ರಪಂಚದಲ್ಲಿ ಇವರಿಗೆ ವಿಶೇಷ ಸ್ಥಾನವಿಲ್ಲ. ಇವರ ಶಿಷ್ಯ ಪರಂಪರೆ ವಿಪುಲವಾದ ಸಾಹಿತ್ಯವನ್ನು ಸೃಷ್ಟಿಸಿದೆ. ಅವರುಗಳಲ್ಲಿ ಪ್ರಮುಖ ರಾದವರು ಮತ್ತು ಪರಮ ಗಣ್ಯರಾದವರು ಕಬೀರ್‌ದಾಸ್. ಇವರು ಉತ್ತರ ಭಾರತದಲ್ಲಿ ನಿರ್ಗುಣ ಬ್ರಹ್ಮೋಪಾಸನೆಗೆ ಮೂಲಕಾರಣರು. ಇವರು ವೇದಾಂತ ತತ್ವಗಳನ್ನು ಅಂಗೀಕರಿಸಿದರೂ ಅವತಾರಗಳನ್ನೂ ಮೂರ್ತಿಪೂಜೆಯನ್ನೂ ಕರ್ಮಾಚರಣೆಯನ್ನೂ ನಿರ್ದಾಕ್ಷಿಣ್ಯವಾಗಿ ಖಂಡಿಸಿದರು. ಕಬೀರರ ಉಪದೇಶದಿಂದ ಪ್ರೇರಿತವಾದ ಮುಂದಿನ ಪಂಥಗಳಲ್ಲಿ ಪಂಜಾಬಿನ ಗುರು ನಾನಕರ ಸಿಖ್ ಪಂಥ ಪ್ರಧಾನ ವಾದುದು. ಇವರು ಖಾಲ್ಸಾ ಎಂಬ ವೀರಪಕ್ಷವನ್ನೂ ಸ್ಥಾಪಿಸಿದರು. ಪಶ್ಚಿಮ ಬಂಗಾಲದ ದರ್ಭಾಂಗ ಜಿಲ್ಲೆಯ ವಿಸಪಿ ಎಂಬ ಊರಿನ ವಿದ್ಯಾಪತಿ ಠಾಕೂರ್ ಎಂಬುವವರು ಕೃಷ್ಣೋಪಾಸಕರಾಗಿ ಪ್ರಸಿದ್ಧ ರಾದವರು. ಇದೇ ಕಾಲದಲ್ಲಿ ಪಶ್ಚಿಮ ಭಾರತದಲ್ಲಿ ಮೀರಾಬಾಯಿ,

ದಕ್ಷಿಣದಲ್ಲಿ ವಲ್ಲಭಾಚಾರ್ಯರು, ಮಹಾರಾಷ್ಟ್ರದ ಸೂರದಾಸ್, ಮುಂತಾದವರು ಅಗ್ರಗಣ್ಯರು.

ಹಿಂದೂ ಕವಿಗಳಂತೇ ಮುಸಲ್ಮಾನ ಕವಿಗಳೂ ಹಿಂದೂ ಮುಸಲ್ಮಾನ ಐಕ್ಯಮತ್ಯಕ್ಕೆ ವಿಶೇಷ ಸಹಾಯ ಮಾಡಿದರು. ಇಸ್ಲಾಂ ಮತ ಅನುಯಾಯಿಗಳಾದರೂ ಅಂಧಶ್ರದ್ಧೆಯನ್ನು ಬದಿಗೊತ್ತಿ ಪ್ರೇಮ ಸಾಧನೆಯಿಂದ ಈಶ್ವರ ಸಾಕ್ಷಾತ್ಕಾರ ಮಾಡಿಕೊಳ್ಳುವ ಮಾರ್ಗವನ್ನು ಆಗಲೇ ಪ್ರಚಲಿತದಲ್ಲಿದ್ದ ಕತೆಗಳ ಮೂಲಕ ಪ್ರಚಾರಮಾಡಿದರು. ಇವರುಗಳನ್ನು ಸೂಫೀ ಕವಿಗಳೆನ್ನುತ್ತೇವೆ. ಇವರು ಸಾಮಾನ್ಯವಾಗಿ ಪಾರ್ಸಿ ಭಾಷೆಯಲ್ಲಿ ಪ್ರಸಿದ್ಧವಾಗಿರುವ ಮಸನವೀ[೧] ಎಂಬ ಪ್ರಬಂಧ ಶೈಲಿಯಲ್ಲಿ, ದೋಹ ಮತ್ತು ಚೌಪಾಯೀ ಛಂದಸ್ಸುಗಳಲ್ಲಿ, ಅವಧಿ ಭಾಷೆಯಲ್ಲಿ ಕಾವ್ಯಗಳನ್ನು ರಚಿಸಿದ್ದಾರೆ. ಇವರುಗಳಲ್ಲಿ ಮಂಝನ್, ಕುತಬನ್, ಉಸ್ಮಾನ್, ಕಾಸಿಂಶಾಹ, ಶೇಖ್‌ನಬೀ, ನೂರ್ ಮಹಮದ್, ಮಲ್ಲಿಕ್ ಮಹಮದ್ ಜಾಯಸಿ ಮುಂತಾದವರು ಪ್ರಮುಖರು. ಇವರು ಪ್ರದರ್ಶಿಸಿದ ಭಕ್ತಿ ಮಾರ್ಗವು ಮಾಧುರ್ಯತೆ, ಪ್ರೇಮ, ಶೃಂಗಾರದ ಮಾರ್ಗದಿಂದಾಗಿ ಹೆಚ್ಚು ಕಲಾಮಯವಾಯಿತು.

೧. ಮಸನವೀ ಶೈಲಿಯಲ್ಲಿ ಸರ್ಗ ವಿಭಾಗಗಳು ಇರುವುದಿಲ್ಲ. ಕಥೆ ಕ್ರಮವು ಮುಂದುವರೆಯುತ್ತದೆ. ಮಧ್ಯೆಮಧ್ಯೆ ಪ್ರಸಂಗಗಳ ಅನುಸಾರ ಶೀರ್ಷಿಕೆಗಳನ್ನು ಕೊಡಲಾಗಿರುತ್ತದೆ. ಇಲ್ಲಿನ ರಚನೆ ಎರಡು ಚರಣಗಳ ಒಂದು ಛಂದಸ್ಸಿನದಾಗಿರುತ್ತದೆ.

ಅಧ್ಯಾಯ ೨

ಸೂಫೀ ಸಂಪ್ರದಾಯ

ಈ ಸೂಫೀ ಕವಿಗಳು ಕಲೆಯ ಕೃಷಿಕರು. ಕಲೆಯ ಕೃಷಿ ಅವರುಗಳ ಜೀವನದ ಗುರಿಯಾಗಿರಲಿಲ್ಲ; ಬದಲಾಗಿ ಅವರು ಅದನ್ನು ಜೀವನ ಮಾರ್ಗವನ್ನಾಗಿ ಮಾಡಿಕೊಂಡರು. ಇವರ ತತ್ವಗಳನ್ನು ಅನುಸರಿಸಲು ದೈವೀಕ ಸೌಂದರ್ಯವನ್ನು ಅರಿತಿರಬೇಕಾಗುತ್ತದೆ. ಸೌಂದರ್ಯ ಜ್ಞಾನದ ಪರಿಣತಿಯನ್ನು ಕಾವ್ಯ ಕಲೆಯ ಚಿತ್ತಾರದ ಮೂಲಕ ಬಿಡಿಸಿ ಪ್ರದರ್ಶಿಸಿದವರು ಮತ್ತು ಜ್ಞಾನ ಬೋಧೆಯ ಒಳ ನೋಟ ಇರುವಂಥವರು ಈ ಸೂಫಿಗಳು. ಇವರ ತತ್ವದ ಆಧ್ಯಾತ್ಮ ಮಾರ್ಗವು ಮಾನವನನ್ನು ಬಹುವಿಧತ್ವದ ಸೆರೆಯಿಂದ ಬಿಡಿಸುವುದು, ಅಪಾಥಭೂತಿತನದಿಂದ ಪಾರುಮಾಡುವುದು ಮತ್ತು ಬದುಕಿನ ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯುವುದೇ ಆಗಿದೆ. ಅತಾರ್ಕಿಕ ಧರ್ಮ ಬೋಧಗಳನ್ನು ಪ್ರೇಮ, ಭಕ್ತಿಯ ನೆಲೆಗಟ್ಟಿನಲ್ಲಿ ವಿರೋಧಿಸಿದವರು ಈ ಸೂಫಿಗಳು. ಉತ್ಕಟ ಸೂಫೀ ಅನುಯಾಯಿಗಳಲ್ಲಿ ಈಶ್ವರ ಮತ್ತು ಮನುಷ್ಯರ ನಡುವೆ ಯಾರ ಮಧ್ಯಸ್ಥಿಕೆಗೂ ಅವಕಾಶ ವಿರುತ್ತಿರಲಿಲ್ಲ. ಹಾಗಾಗಿ ಅವರುಗಳು ಧಾರ್ಮಿಕ ಪ್ರತಿನಿಧಿಗಳಾದ ಮುಲ್ಲಾ, ಕಾಜೀ, ಮೌಲವೀಯರುಗಳು ಮತ್ತು ರಾಜನೀತಿಯ ಪ್ರತಿನಿಧಿಗಳಾದ ಸುಲ್ತಾನರುಗಳನ್ನು ವಿರೋಧಿಸುತ್ತಿದ್ದರು.

ಸಾಮಾನ್ಯವಾಗಿ ಇವರೆಲ್ಲರೂ ಸಂತರಾಗಿದ್ದರು. ಸೂಫೀ ಸಂತರು ಎಂದೇ ಇವರನ್ನು ಕರೆಯಲಾಗುತ್ತಿತ್ತು. ಮಧ್ಯಪ್ರಾಚ್ಯದಿಂದ ಆಮದಾದ ಇಸ್ಲಾಂ ಧರ್ಮದ ಹೊಸದ ಸೂಫೀ ಪಂಥದ ಅನುಯಾಯಿಗಳು ಇವರು. ಅಬ್ದುಲ್ ಫಿದಾ ಎಂಬ ಇತಿಹಾಸಕಾರ ಹೇಳುವಂತೆ ಮಹಾನ್ ಆತ್ಮಗಳಾದ 'ಅಶಾವೀ ಸಫಾ' (ಧ್ಯಾನವಾಗಲೂ ಪೂಜಾ ಮಂದಿರದಲ್ಲಿ ಕುಳಿತಿರುವವರು) ಅವರುಗಳನ್ನು ಸೂಫೀಗಳೆಂದು ಕರೆಯುತ್ತಾರೆ. ಅವರುಗಳು ಪೈಗಂಬರನ ಸಂಗಡ ಭೋಜನವನ್ನು ಮಾಡುತ್ತಿದ್ದರು. ಮಹಮದ್ ಪೈಗಂಬರನ ಕಾಲವಾದ ಇನ್ನೂರು ವರ್ಷಗಳ ನಂತರವೇ ಇವರುಗಳನ್ನು ಸೂಫೀಗಳು ಎಂದು ಕರೆದರು. ಇಸ್ಲಾಂ ಧರ್ಮದಲ್ಲೂ ಕೂಡ ಕಂಡುಬರುವ ಸಿದ್ಧಾಂತ ಹಾಗೂ ಅನುಭವ ಪಂಥಗಳೆಂಬ ಎರಡು ವಿಧಗಳಲ್ಲಿ ಎರಡನೆಯದಾದ ಅನುಭವ ಪಂಥದ ಭಕ್ತ ಸಮೂಹವನ್ನೇ ಸೂಫಿಗಳೆಂದು ಕರೆದರು.

ಗ್ರೀಕ್‌ನ 'ಸೋಫೋಸ್' ಎಂದರೆ ಜ್ಞಾನ, ಪರ್ಶಿಯನ್ನರ 'ಸಫ' ಎಂದರೆ ಮಸೀದಿಯ ಜಗುಲಿ, 'ಸೂಫಾ' ಎಂದರೆ ಉಣ್ಣೆಯ ಬಟ್ಟೆ ಎಂಬೆಲ್ಲ ಪದಗಳ ನಡುವಣ 'ಸೂಫೀ' ಪದದ ಅರ್ಥವನ್ನು ವಿದ್ವಾಂಸರುಗಳು ಹುಡುಕಲು ತೊಡಗಿದ್ದಾರೆ. ಈ ಸೂಫೀಗಳು ಅನಿಕೇತನರಾದ್ದರಿಂದ ಮಸೀದಿಯ ಜಗುಲಿಯ ಮೇಲೇ ಬದುಕನ್ನು ಸವೆಯಿಸುತ್ತಿದ್ದಿರಬಹುದು. ಪ್ರೇಮಮಾರ್ಗ ಬೋಧೆಯ ಮೂಲಕ ಜ್ಞಾನ ಪ್ರಸರಣದಲ್ಲಿ ತೊಡಗಿದ್ದಿರಬಹುದು ಅಥವಾ ಉಣ್ಣೆಯ ಕಂಬಳಿಯನ್ನು ಹೊದ್ದು ತಿರುಗುತ್ತಿದ್ದಿರಬಹುದು. ಆದರೆ ನಿಜವಾದ ಸೂಫೀ ಪದದ ಅರ್ಥವನ್ನು ಬಶರ್ ಹಾಫಿ ಎನ್ನುವ ಸೂಫಿ ಸಂತ ಹೇಳುವಂತೆ— 'ಯಾರ ಮನಸ್ಸು ಭಗವಂತನ ವಿಷಯದಲ್ಲಿ ಸಾಫ್=ಸ್ವಚ್ಛ, ತಿಳಿ ಆಗಿರುತ್ತದೆಯೋ ಅವನೇ ಸೂಫೀ ಎಂದು ತಿಳಿಯಬಹುದು. ಈ ಸೂಫೀಗಳು ಆತ್ಮಪತಿ— ಪರಮಾತ್ಮಸತಿ ಎಂಬ ಮಧುರ ಭಾವದ ಭಕ್ತರುಗಳಾಗಿದ್ದಾರೆ.

ಸೂಫೀ ಮತ ಚರಿತ್ರೆ

ಬ್ರೌನ್ ಮತ್ತು ನಿಕಲ್ಸನ್ ಅವರುಗಳು ಹೊಸ ಪ್ಲೆಟೋನಿಕ್ ಮತದ ಪ್ರಭಾವದಿಂದ ಈ ಸೂಫೀ ಮತದ ಪ್ರಾದುರ್ಭಾವವಾಗಿದೆ ಎಂದು ಅಭಿಪ್ರಾಯಪಟ್ಟರೆ, ಫ್ರೆಂಚ್ ಲೇಖಕನಾದ ಡೇಜ್ಜಿಯು ಭಾರತೀಯ ದರ್ಶನಗಳ ಪ್ರಭಾವದಿಂದ ಸೂಫೀ ಪಂಥ ಹುಟ್ಟಿ ಕೊಂಡಿದೆ ಎನ್ನುತ್ತಾನೆ. ಇವನು ಹೇಳುವಂತೆ ಈ ಪ್ಲೇಟೋನ ನಂತರದ ನವ ಪ್ಲೇಟೋನಿಕ್ ಮತವೇ ಭಾರತೀಯ ಆರ್ಯ ದರ್ಶನಗಳ ಪ್ರಭಾವದಿಂದ ವಿಕಸಿತಗೊಂಡಿರುವುದೇ ಆಗಿದೆ. ಮಧ್ಯ ಏಷಿಯಾದಲ್ಲಿ ಕಂಡುಬರುವ ಬುದ್ಧನ ಮೂರ್ತಿಗಳು, ಕಾರ್ಲಾ ಮುಂತಾದ ಗುಹೆ ಗಳಲ್ಲಿ ಕಂಡುಬರುವ ಕ್ರಿ. ಪೂ. ೨ ಮತ್ತು ೩ನೇ ಶತಮಾನಗಳಿಗೆ ಸೇರುವ ಯವನ ವ್ಯಾಪಾರಿಗಳು ಬೌದ್ಧ ಮಠಗಳಿಗೆ ಕೊಟ್ಟ ದಾನಗಳ ಅಂಕಿತಗಳು, ಕ್ರಿ. ಪೂ. ೧ನೇ ಶತಮಾನದಲ್ಲಿ ಲಂಕೆಯ 'ರತ್ನಮಾಲ್ಯ ಚೈತ್ಯ'ದ ಉದ್ಘಾಟನೋತ್ಸವದಲ್ಲಿ ಬೌದ್ಧ ಭಿಕ್ಷು ಧಮ್ಮರಖ್ಖಿತನು ಪಾಲ್ಗೊಳ್ಳುವ ಪ್ರಸಂಗ[೧] ಮುಂತಾದವುಗಳು ಸಿದ್ಧಪಡಿಸುವಂತೆ ಯುನಾನಿನಲ್ಲಿ ಹುಟ್ಟಿದ ಹೊಸ ಪ್ಲೇಟೋನಿಕ್ ಮತವು ಭಾರತೀಯ ಆರ್ಯ ದರ್ಶನಗಳ ಪ್ರಭಾವದಿಂದಲೇ ಹುಟ್ಟಿದ್ದು ಎಂಬ ವಾದಕ್ಕೆ ಪುಷ್ಟಿ ದೊರೆಯುತ್ತದೆ. ಒಟ್ಟಿನಲ್ಲಿ ದಾರ್ಶನಿಕ ಕಾರ್ಯಗಳಲ್ಲಿ ಅತ್ಯಂತ ವಿಸ್ತಾರ ವಾಗಿದ್ದಿರುವುದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಇದರ ಪ್ರಭಾವದಿಂದ ಕಂಡ ಸೂಫೀ ಪಂಥ ಬಹಳ ಭಿನ್ನವಾಗಿ ತನ್ನ ದರ್ಶನ ಕಾರ್ಯಗಳನ್ನು ಬೆಳೆಯಿಸಿಕೊಂಡಿತು. 'ಶಾಮೀ'[೨]ಯರ ದರ್ಶನದಲ್ಲಿನ ಪ್ರೇಮಭಾವ ವನ್ನು ಆರಾಧನೆಯ ಮೆಟ್ಟಿಲುಗಳನ್ನಾಗಿಸಿಕೊಂಡರು. ತಮ್ಮದೇ ಆದ

---

೧. ಭದಂತ ಆನಂದ ಕೌಸಲ್ಯಾಯನರ ಹಿಂದೀ ಅನುವಾದದ 'ಮಹಾವಂಶ' ಪುಟ. ೧೩೬, ಅಧ್ಯಾಯ ೨೯– ೬.

೨. ಶಾಮೊದೇಶ ಇದು ಮಧ್ಯ ಪ್ರಾಚ್ಯದ ಇರಾಕ್ ಬಳಿ ಇದೆ.

ದರ್ಶನ— ಅನುಭವಗಳ ರಕ್ಷಣೆಗಾಗಿ ಕಾಲ ಮತ್ತು ದೇಶದ ಅನುಕೂಲತೆಯಿಂದ ಅವುಗಳನ್ನು ಕುರಾನಿನೊಂದಿಗೆ ಸಂಬಂಧ ಸೂಚಿಸಿಕೊಂಡರು. ಈ ಕುರಾನಿನೊಂದಿಗಿನ ಸಂಬಂಧದಿಂದ ಈ ಸೂಫಿ ಮತವು ಕುರಾನಿನೊಳಗಿನ ರಹಸ್ಯ ಉಕ್ತಿಗಳ ಪ್ರಭಾವ ಪಡೆದೇ ಪ್ರಾರಂಭವಾಯಿತೆನ್ನುವ ಕೆಲವು ವಿದ್ವಾಂಸರೂ ಇದ್ದಾರೆ. ಸೂಫೀ ಪಂಥದ ಬೆಳವಣಿಗೆಯಲ್ಲಿ ಗುರುತಿಸಬಹುದಾದ ಕೆಲವು ಪ್ರಮುಖ ಹಂತಗಳೆಂದರೆ, ಪ್ರಾರಂಭದ ಹಂತದಲ್ಲಿ ಸೂಫೀ ಅನುಯಾಯಿಗಳಲ್ಲಿ ಭಯ ಮತ್ತು ದಂಡನೆಯ ಪ್ರಾಮುಖ್ಯತೆ ಇದ್ದುದು ಕಂಡುಬರುತ್ತದೆ. ಭಿಕಾರಿಯಾಗಿ ಜೀವನ ಸಾಗಿಸುವುದೇ ಶ್ರೇಷ್ಠ ಎಂದು ತಿಳಿಯಲಾಗುತ್ತಿತ್ತು ಮತ್ತು ಅವರುಗಳು ಸಾಂಸಾರಿಕ ಜೀವನದಿಂದ ದೂರವಿರುತ್ತಿದ್ದರು. ಎರಡನೆಯ ಹಂತದಲ್ಲಿ ಹೊಸ ತತ್ವಗಳ ಸಮಾವೇಶ ಉಂಟಾಯಿತು. ಮೊದಲ ಯುಗದ ಕೊನೆಯಲ್ಲೇ ಚಿಗುರಿದ್ದ ಪ್ರೇಮ, ಆರಾಧನಾ ಭಾವಗಳಿಗೆ ಬಲ ಬಂದಿತು. ಅನುಭವ ಬುದ್ಧಿ ಮತ್ತು ತರ್ಕಗಳಿಗೂ ಸ್ಥಳಾವಕಾಶ ಒದಗಿಸಿತು. ಮೂರನೆಯ ಹಂತದಲ್ಲಿ ಇದು ಇಸ್ಲಾಂ ಧರ್ಮದಲ್ಲೇ ಸಂಪೂರ್ಣ ಲೀನವಾಯಿತು.

ಭಾರತದಲ್ಲಿ ಈ ಸೂಫೀ ಮತವು ಕಾಶ್ಮೀರ್, ಸಿಂಧ್ ಮತ್ತು ಗುಜರಾತ್ ರಾಜ್ಯಗಳನ್ನು ಒಳಗೊಳ್ಳುವ ಪಶ್ಚಿಮ ಭಾಗದಲ್ಲಿ ಮೊಟ್ಟಮೊದಲಿಗೆ ಕಾಲಿಟ್ಟಿತು. ದೆಹಲಿಯ ಎಲ್ಲ ಸುಲ್ತಾನರೂ ಯಾರಾದರೊಬ್ಬ ಸೂಫೀ ಸಾಧಕರ ಶಿಷ್ಯರಾಗಿರುತ್ತಿದ್ದರು ಮತ್ತು ಸೂಫೀಯನ್ನು ಆದರಿಸಿ ಗೌರವಿಸುತ್ತಿದರು. ಹಾಗಾಗಿ ಭಾರತದ ಉತ್ತರ ಭಾಗಗಳಲ್ಲಿ ಸೂಫೀ ಪಂಥ ಸುಲಭವಾಗಿ ಹರಡಿತು. ಮೊಘಲ್ ರಾಜ್ಯದ ವಿಸ್ತಾರದ ಜೊತೆಯಲ್ಲೇ ಸೂಫೀ ಪ್ರಚಾರವೂ ಬೆಳೆಯಿತು. ಶಹಬಾಜಲಾಲ್ ಸುಹರ್‌ವರ್ದಿಯು ಬಂಗಾಳವನ್ನು ತನ್ನ ಪ್ರಚಾರ ಸ್ಥಾನವನ್ನಾಗಿ ಮಾಡಿಕೊಂಡ. ಆದ್ದರಿಂದಲೇ ಬಂಗಾಳದ ಬಾವುಲ್ ಗೀತೆಗಳಲ್ಲಿ ಈ ಸೂಫೀ ಛಾಯೆ ಇದೆ. ಈ ಸೂಫೀ ಸಂಪ್ರದಾಯವು

ಚಿಶ್ತಿಯಾ, ಸುಹರ್‌ವರ್ದಿಯಾ, ಕದರಿಯಾ, ನಕ್ಷಬಂದಿಯಾ ಎಂಬ ನಾಲ್ಕು ಸಂಪ್ರದಾಯಗಳಲ್ಲಿ ಹರಡಿ ಇಸ್ಲಾಂ ಧರ್ಮ ಮತ್ತು ಸಂಸ್ಕೃತಿಗಳನ್ನು ಭಾರತೀಯ ನೆಲದಲ್ಲಿ ಬೆರೆಸಿದವು. ಕೆಲವು ಆದರ್ಶ ಮುಸಲ್ಮಾನ ಧರ್ಮಿಗಳು ಇಸ್ಲಾಂ ಧರ್ಮದ ವಿಚಾರ ಧಾರೆಯನ್ನು ಸ್ವೀಕರಿಸಲು ಹಿಂದೂಗಳಿಗೆ ಪ್ರಚೋದನೆ ಮಾಡಿದರು. ಅದೇ ಸಂದರ್ಭದಲ್ಲಿ ಹಿಂದೂ ಮುಸಲ್ಮಾನರಲ್ಲಿನ ಭೇದವನ್ನು ಅಳಿಸಿಹಾಕಲು ಎರಡೂ ಕೋಮಿನ ಗಣ್ಯರುಗಳು ಪ್ರಯತ್ನಶೀಲರಾದರು. ಮುಸಲ್ಮಾನ ಧರ್ಮದ ಕೆಲವು ಮಹನೀಯರುಗಳು ಭಾರತೀಯ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಚಾರಧಾರೆಯನ್ನು ಒಪ್ಪಿ ಪರಸ್ಪರ ಧರ್ಮಗಳಲ್ಲಿನ ಭೇದ ಭಾವವನ್ನು ಅಳಿಸಲು ಪ್ರಯತ್ನಿಸಿದರು. ಅವರುಗಳನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ 'ಸೂಫೀ'ಗಳು ಎಂದು ಕರೆಯಲಾಗುತ್ತಿತ್ತು. ಈ ಸೂಫಿಗಳು ಮತಾಂತರದ ಉದ್ದೇಶ ಹೊಂದಿ ಹಿಂದೂಗಳಿಗೆ ಇಸ್ಲಾಂ ಧರ್ಮದ ಬೋಧನೆ ಮಾಡಲು ಮೊದಲು ಮಾಡಿದರು. ಆದರೆ ಧಾರ್ಮಿಕ ಸಾಧನೆಯ ಹಾದಿಯಲ್ಲಿ ಪಡೆದ ಅನುಭವಗಳು ಅವರಿಗೆ ಒಂದು ಹೊಸ ಚಿಂತನೆ ಹುಟ್ಟುಹಾಕುವಂತೆ ಪ್ರೇರೇಪಿಸಿದವು. ಭಾರತೀಯ ದಾರ್ಶನಿಕ ದ್ವೈತ, ಅದ್ವೈತ ಸಿದ್ಧಾಂತಗಳು ಜನಪ್ರಿಯವಾದ ಆ ಕಾಲದಲ್ಲಿ ಈ ಸೂಫೀಗಳು ಅದ್ವೈತಕ್ಕೆ ಮಾರುಹೋಗಿ ಇಸ್ಲಾಮೀ ಅದ್ವೈತವನ್ನು ಉಪದೇಶಿಸಿದರು ಈ ಸೂಫೀಗಳು ಪ್ರೇಮಧರ್ಮಿಯರಾದರು. ಅವರಿಗೆ ಸೌಂದರ್ಯವೇ ದೇವರು, ಪ್ರಣಯವೇ ಪೂಜೆಯಾಯಿತು ಆತ್ಮ ಪತಿ— ಪರಮಾತ್ಮ ಸತಿ ಎನ್ನುವ ಅದ್ವೈತ ತತ್ವ ಇವರದ್ದು. ಆದರೆ ಇವರು ಪ್ರಪಂಚವನ್ನು 'ಮಾಯೆ' ಎಂದು ಭಾವಿಸಲಿಲ್ಲ, 'ಸತ್ಯ ವಸ್ತುಗಳ ವ್ಯಕ್ತಿರೂಪ' ಎಂದು ಭಾವಿಸಿದ್ದರು. ಮನುಷ್ಯನು ಪರಮಾತ್ಮನ ಅಂಶ, ಪರಮಾತ್ಮನು ಸುಂದರ, ಇದೇ ಸೂಫೀ ತತ್ವದ ಅಡಿಗಲ್ಲು, ಸೃಷ್ಟಿಗೂ ಸ್ಥಿತಿಗೂ ಪ್ರೇಮವೇ ಕಾರಣ. ಅರಿಯಲಾಗದ ಪರಮಾತ್ಮನನ್ನು, ಪ್ರೇಮರೂಪದಲ್ಲಿ ಕಾಣಬಹುದು. 'LOVE IS

GOD' ಎಂಬ ತತ್ವದ ಆಧ್ಯಾತ್ಮಿಕ ಪ್ರೇಮ ಮಾರ್ಗವನ್ನು ಸೂಫೀಗಳು ಸರ್ವಶ್ರೇಷ್ಠವೆಂದು ಭಾವಿಸುತ್ತಾರೆ. ಸೂಫೀ ಸಾಧಕನು ಆಧ್ಯಾತ್ಮಿಕ ಶಿಕ್ಷಣದ ಸಂದರ್ಭದಲ್ಲಿ ನಾಲ್ಕು ಹಂತಗಳ (ಮುಖಾಮಾತ್) ಸಾಧನೆಯಲ್ಲಿ ಸಾಗಬೇಕು. ಅವುಗಳೇ,

೧. ಶರೀ ಅತ್ (ಧರ್ಮ ಗ್ರಂಥಗಳ ಪಠಣ)

೨. ತರೀಕತ್ (ಗುರುವಿನ ಬಳಿ ಅಧ್ಯಯನ)

೩. ಮಾರೀಫತ್ (ಗುರುದೀಕ್ಷೆಯ ನಂತರದ ಪೂರ್ಣಜ್ಞಾನ)

೪. ಹಕೀಕತ್ (ಸತ್ಯಸಾಕ್ಷಾತ್ಕಾರ)

ಮತ್ತು ನಾಲ್ಕು ಆಚಾರಗಳಾದ ೧. ನಮಾಜ್(ಪ್ರಾರ್ಥನೆ) ೨. ಜಕಾತ್ (ಧ್ಯಾನ) ೩. ರೋಜಾ (ಉಪವಾಸ) ೪. ಹಜ್ಜ್ (ತೀರ್ಥಯಾತ್ರೆ) ಮುಂತಾದವುಗಳನ್ನು ದಾಟಿ ಸಾಧನೆಯ ನಂತರ ಅವನು ಸೂಫೀ ಸಂತನೆನಿಸಿಕೊಳ್ಳುತ್ತಾನೆ. ಸತ್ಯ ಸಾಕ್ಷಾತ್ಕಾರದ ನಂತರ ಸೂಫೀಯು ತನ್ನ ಪ್ರಿಯ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವ ಅನುಭವವನ್ನು ಲೌಕಿಕ ಪ್ರೇಮದ ಪ್ರೇಮಿಯೊಬ್ಬ ತನ್ನ ಪ್ರಿಯತಮೆಯನ್ನು ಪಡೆಯುವ ಅನುಭವಕ್ಕೆ ಸಮಾನವಾಗಿಯೇ ಕಾಣಲಾಗುತ್ತದೆ. ಹೃದಯ ಶುದ್ಧಿಯೇ ಈ ಸತ್ಯಾನ್ವೇಷಣೆಗೆ ದಾರಿ. ಆದ್ದರಿಂದಲೇ ಸೂಫೀ ಸಾಹಿತ್ಯಗಳಲ್ಲಿ ಪ್ರೇಮಿಗಳ ಪ್ರೇಮಲೀಲೆ ಕಥೆಗಳ ಅಧಿಕ ವರ್ಣನೆ ಇರುತ್ತದೆ. ಈ ಪ್ರೇಮ ಕಥೆಗಳಲ್ಲಿ ಲೌಕಿಕ ಪ್ರೇಮದ ಮೂಲಕ ಭಗವಂತನ ಸೌಂದರ್ಯದ ಪ್ರತಿಬಿಂಬ ಕಾಣುವುದೇ ಸೂಫೀಗಳ ಪರಮ ಲಕ್ಷ್ಯವಾಗಿದೆ. ಇವರುಗಳು ಪಾರಸೀ ಹಿಂದೀ ಭಾಷೆಗಳಲ್ಲಿ ರೋಚಕ ಪ್ರೇಮ ಕಥೆಗಳ ಮೂಲಕ ಈಶ್ವರೋನ್ಮುಖ ಪ್ರೇಮದ ಅಭಿವ್ಯಕ್ತಿ ಕಾಣಿಸಿದ್ದಾರೆ.

ಸೂಫೀ ಪ್ರೇಮಕಾವ್ಯದ ಪರಿಚಯವು ನಮಗೆ ವೀರಗಾಥಾ ಕಾಲದಲ್ಲೇ ಸಿಗುತ್ತದೆ. ಆ ಕಾಲದ ಒಬ್ಬ ಪ್ರಮುಖ ಸೂಫೀ ಫಕೀರನಾದ 'ಮುಲ್ಲಾದಾವೂದ್'ನು ನೂರಕ್ ಮತ್ತು ಚಂದಾಳ ಕಥೆಯನ್ನು

'ಚಂದಾವನ್' ಎಂಬ ಕಾವ್ಯವಾಗಿ ಬರೆದನು. ಆದರೆ ಭಕ್ತಿಕಾಲದ ಸೂಫೀ ಸಂತಾನದ ಮಲ್ಲಿಕ್ ಮುಹಮ್ಮದ್ ಜಾಯಸಿ ತನ್ನ ಅಪ್ರತಿಮ ಗ್ರಂಥ 'ಪದ್ಮಾವತ್'ನಲ್ಲಿ ತನಗಿಂತ ಮುಂಚೆ ಪ್ರೇಮಕಾವ್ಯಗಳನ್ನು ರಚಿಸಿದ ಕವಿಗಳು ಮತ್ತು ಕಾವ್ಯಗಳನ್ನು ಕುರಿತು ಉಲ್ಲೇಖಿಸಿದ್ದಾನೆ. ವಸ್ತುತಃ ಹಿಂದೂ ಜೀವನದ ಮನೋರಂಜಕ ಕಥೆಗಳ ಮೂಲಕ ಮುಸಲ್ಮಾನ ಸೂಫೀ ತತ್ವಗಳನ್ನು ಭಾರತೀಯ ಸಾಮಾನ್ಯ ಜನಗಳಿಗೆ ತಲುಪಿಸುವುದು ಸೂಫೀ ಕವಿಗಳ ಪ್ರಮುಖ ಉದ್ದೇಶವೇ ಆಗಿದೆ. ಆದ್ದರಿಂದಲೇ ಎಲ್ಲ ಸೂಫೀ ಕವಿಗಳು ಆಗಿನ ಕಾಲದ ಸಾಮಾನ್ಯ ಮನುಷ್ಯರ ಭಾಷೆಗಳಾದ ಅವಧೀ, ಖಡೀಬೋಲೀ, ಬ್ರಜ ಪ್ರಭಾವದ ಅವಧೀ, ರಾಜಸ್ಥಾನೀ ಮಿಶ್ರಿತ ಅವಧೀ ಭಾಷೆಗಳಲ್ಲಿ ಬರೆದರು.

ಹಿಂದೀ ಸಾಹಿತ್ಯದ ಪ್ರೇಮಾಖ್ಯಾನ ಪರಂಪರೆಯಲ್ಲಿ ಸೂಫೀ ಪ್ರೇಮಾಖ್ಯಾನಗಳ ಸ್ಥಾನ ಅತ್ಯಂತ ಮಹತ್ವಪೂರ್ಣವಾದದ್ದು. ಮುಸಲ್ಮಾನ ಧರ್ಮಿಗಳೂ ಉದಾರ ಹೃದಯದವರೂ ಆದ ಈ ಸೂಫೀ ಸಾಧಕ ಕವಿಗಳು ಈ ಭೂಮಿಯನ್ನು ಕೇವಲ 'ವೀರಭೋಗಿ' ಯನ್ನಾಗಿಸದೆ 'ಪ್ರೇಮಭೋಗಿ'ಯನ್ನಾಗಿಸಿದರು. 'ಕಾವ್ಯವು ಕಾಂತಾಸಮ್ಮಿತ' ಎಂಬ ಸಂಸ್ಕೃತ ಕವಿಗಳ ಉಕ್ತಿಯನ್ನು ಸಾರ್ಥಕಗೊಳಿಸಿದರು. ಈ ಪ್ರೇಮಾಖ್ಯಾನ ಪರಂಪರೆಯು ಹಿಂದೀ ಕವಿಗಳಿಗೆ ಅಪಭ್ರಂಶದಿಂದ 'ಥಾ.ಥೀ'[೧]ರೂಪದಲ್ಲಿ ದೊರಕಿತು. ಅದನ್ನು ಈ ಸೂಫೀ ಸಂತರು ತಮ್ಮ ಮತ ಪ್ರಚಾರಕ್ಕಾಗಿ ಬಳಸಿಕೊಂಡರು. ಈ ಸಾಹಿತ್ಯವನ್ನು ನಿಬಂಧ, ಲೇಖನ, ಜೀವನ ಚಿತ್ರಣ ಮತ್ತು ಕಾವ್ಯ ಪ್ರಕಾರಗಳಲ್ಲಿ ರಚಿಸಿ ಜನಪ್ರಿಯ ಮತ ಪ್ರಚಾರದ ಮಾರ್ಗವನ್ನು ಕಂಡುಕೊಂಡರು.

---

೧. ನಮ್ಮಲ್ಲಿ ಬಳಕೆಯಲ್ಲಿರುವ ತೋಂಡೀ ಸಂಪ್ರದಾಯವನ್ನೇ ಹಿಂದಿಯಲ್ಲಿ 'ಥಾ. ಥಿ' ಸಂಪ್ರದಾಯ ಎನ್ನುತ್ತಾರೆ.

ಅಧ್ಯಾಯ ೩

ಮಲ್ಲಿಕ್ ಮುಹಮ್ಮದ್ ಜಾಯಸಿ

(ಸುಮಾರು ಕ್ರಿ. ಶ. ೧೪೭೦-೧೫೪೨)

ಕ್ರಿ. ಶ. ೧೫ನೇ ಶತಮಾನದಲ್ಲಿ ಅವಧ್‌ನಲ್ಲಿ ವಾಸವಾಗಿದ್ದ ಮಲ್ಲಿಕ್ ಮಹಮ್ಮದ್ ಜಾಯಸಿ ಒಬ್ಬ ಪ್ರಮುಖ ಸೂಫೀ ಸಂತ ಮತ್ತು ಪ್ರಖ್ಯಾತ ಕವಿ. ಇವರು ಅವಧೀ ಭಾಷೆಯಲ್ಲಿ ತಮ್ಮ ಕಾವ್ಯ ರಚನೆ ಮಾಡಿದರು. ಇವರ ಕಾಲ ದೇಶಾದಿಗಳನ್ನು ಕುರಿತಂತೆ ಸಾಹಿತ್ಯ ಲೋಕದಲ್ಲಿ ಹೆಚ್ಚು ತಿಳುವಳಿಕೆ ಇಲ್ಲ. ಕವಿ ತಾವೇ ಹೇಳಿಕೊಂಡ ಸಂಗತಿಗಳಿಂದ ತಿಳಿದು ಬರುವಂತೆ ಅವರು ಜಾಯಸ್[1] ನಲ್ಲಿ ಬಂದು ನೆಲೆಸಿದವರಾಗಿದ್ದರು[2] ಆದ್ದರಿಂದಲೇ ಅವರನ್ನು ಜಾಯಸಿ ಎಂದು ಕರೆಯುತ್ತಾರೆ, ಮತ್ತು ಅವರು ಅದೇ ಹೆಸರಿನಿಂದ ಪ್ರಖ್ಯಾತಿ ಹೊಂದಿದರು.

ಒಂದು ಜನಶ್ರುತಿಯಿಂದ ತಿಳಿದುಬರುವಂತೆ ಜಾಯಸಿಯು ಗಾಜಿಪುರದ ಒಬ್ಬ ದರಿದ್ರ ಮುಸಲ್ಮಾನನ ಮಗನಾಗಿದ್ದರು ಚಿಕ್ಕವಯಸ್ಸಿ

೧. ಉತ್ತರ ಪ್ರದೇಶದಲ್ಲಿನ ಒಂದು ಊರು.

೨. ಜಾಯಸ್ ನಗರ್ ಧರಮ್-ಅಸ್ಥಾನೂ । ತಹಾಂ ಆಇ ಕವಿ ಕೀನ್ಹ ಬಖಾನೂ ।

ನಲ್ಲಿ ಅವರಿಗೆ ಸಿಡುಬು ತಗುಲಿ ಅವರು ಬದುಕುಳಿಯುವ ಎಲ್ಲ ಆಸೆಗಳೂ ಕಳೆದು ಹೋಗಿದ್ದವು. ಅವರ ತಾಯಿಯವರು ಮಾಕನಪುರದ ಮದರಶಹಾನ ಸಹಾಯ ಕೇಳಿದರು. ಆ ಸಹಾಯ ಸಿಗುವ ಮೊದಲೇ ತಾಯಿ ತೀರಿಕೊಂಡರು. ತಂದೆ ಬಹಳ ಮುಂಚೆಯೇ ತೀರಿಹೋಗಿದ್ದರು. ಜಾಯಸಿ ಹೇಗೋ ಏನೋ ಉಳಿದುಕೊಂಡರು. ಆದರೆ ಅವರ ಒಂದು ಕಣ್ಣು ಕಾಣಿಸದಾಯಿತು[೧] ಒಂದು ಕಿವಿಯೂ ಕೇಳಿಸದಾಯಿತು, ಕುರೂಪಿಯಾದರು, ಅನಾಥರಾದರು. ಸಿಡುಬು ಮಾರಿಯಿಂದ ಬದುಕುಳಿದ ಮಗುವನ್ನು ಸಾಧುಗಳು ಸಾಕಿ ಬೆಳೆಸಿದರು. ಹಾಗಾಗಿ ಚಿಕ್ಕಂದಿನಿಂದಲೇ ಅವರಿಗೆ ಸಾಧು–ಸಂತರು, ಫಕೀರರುಗಳೊಡನೆ ಒಡನಾಟವಿತ್ತು. ಅವರ ಆಲೋಚನೆಗಳೂ ಅದೇ ರೀತಿಯಲ್ಲೇ ಸಹಜವಾಗಿ ಬೆಳೆದವು.

ಇನ್ನೊಂದು ಪ್ರತೀತಿಯಂತೆ ಈ ಕುರೂಪಿ ಜಾಯಸಿಯನ್ನು ನೋಡಿ ದೊರೆಯಾದ ಷೇರ್‌ಷಾಹನು ನಕ್ಕನು. ಅದಕ್ಕೆ ಕವಿಯು ಪ್ರತಿಯಾಗಿ ರಾಜನಿಗೆ, 'ನನ್ನನ್ನು ನೋಡಿ ನಕ್ಕು ಸೃಷ್ಟಿಕರ್ತನ ಸೃಷ್ಟಿಯನ್ನೇ ನೀನು ಅಪಹಾಸ್ಯ ಮಾಡುತ್ತಿದ್ದೀಯ' ಎಂದರಂತೆ[೨] ಅದರಿಂದ ದೊರೆಯು ನಾಚಿಕೊಂಡು ಕ್ಷಮೆ ಯಾಚಿಸಿದನಂತೆ. ಅಮೇಥಿಯ ರಾಜನೊಬ್ಬನಿಗೆ ಬಹಳಕಾಲದಿಂದಲೂ ಮಕ್ಕಳಿಲ್ಲದೇ ಕೊರಗುತ್ತಿರುವಾಗ, ಈ ಜಾಯಸಿಯ ಸಿದ್ಧಿ, ಪ್ರಭಾವಗಳಿಂದಲೇ ಮಕ್ಕಳಾಯಿತಂತೆ. ಹಾಗಾಗಿ ಆ ರಾಜನು ಅವನನ್ನು ಬಹಳವಾಗಿ ಗೌರವಿಸುತ್ತಿದ್ದನಂತೆ. ತಾನು ಒಕ್ಕಣ್ಣನಾಗಿದ್ದರಿಂದ ಜಾಯಸಿಯವರು ತಮ್ಮನ್ನು ಶುಕ್ರಾಚಾರ್ಯರಿಗೆ ಹೋಲಿಸಿಕೊಂಡಿದ್ದಾರೆ.

---

೧. ಏಕ್ ನಯನ್ ಕವಿ. ಮಹಮ್ಮದ್ ಗುನೀ (ಪದ್ಮಾವತ್)
ಮಹಮ್ಮದ್ ಬಾಯೀ ದಿಸೀ ತಜಾ ಏಕ್‌ಸರಬನ್, ಏಕ್ ಆಂಖ್ (ಪದ್ಮಾವತ್)

೨. ಮೋಹೀಂ ಕಹಾಂ ಹಂಸಸಿ ಕಿ ಕರೋರಹಿ (ಪದ್ಮಾವತ್)

ಡಾ। ಗ್ರಿಯರ್‌ಸನ್ ಹೇಳುವಂತೆ ಜಾಯುಸಿಯು ಜಾಯಸ್‌ಗೆ ಬಂದು ಅಲ್ಲಿನ ಸ್ಥಳೀಯ ಪಂಡಿತರುಗಳಿಂದ ಸಂಸ್ಕೃತ ಕಾವ್ಯಗಳ ಅಧ್ಯಯನ ನಡೆಸಿದರು. ಈ ವಾದವನ್ನು ಆಧುನಿಕ ಹಿಂದೀ ಪಂಡಿತರುಗಳು ಒಪ್ಪುವುದಿಲ್ಲ. ಅವರು ಹೇಳುವಂತೆ ಜಾಯುಸಿಯು ಕಾವ್ಯದಲ್ಲಿ ಸಂಸ್ಕೃತ ಕಾವ್ಯ ಸಂಸ್ಕೃತಿಯು ಲವಲೇಶವೂ ಇಲ್ಲ. ಶುದ್ಧ ಅವಧೀ ಅಪಭ್ರಂಶದಲ್ಲಿ ಅವರು ಬರೆದಿದ್ದಾರೆ. ಅವರ ಭಾಷೆಯಲ್ಲಿ ತತ್ಸಮ ವ್ಯವಹಾರವೂ ಇಲ್ಲ. ಅವರು ಚಂದ್ರನನ್ನು ಸ್ತ್ರೀ ಎಂದು ಪರಿಗಣಿಸಿರುವುದು ಯಾವ ಸಂಸ್ಕೃತ ಕಾವ್ಯಗಳಲ್ಲೂ ಕಾಣಸಿಗುವುದಿಲ್ಲ ಹಾಗೂ ಯಾವ ಸಂಸ್ಕೃತ ಪಂಡಿತನೂ ಚಂದ್ರನನ್ನು ಸ್ತ್ರೀ ಎಂದು ಪರಿಗಣಿಸುವುದಿಲ್ಲ. ಜಾಯುಸಿಯ ಶಬ್ದಭಂಡಾರವೂ ತೀರ ಪರಿಮಿತ. ಸಂಸ್ಕೃತ ತಿಳಿದ ಪಂಡಿತರುಗಳಿಗೆ ಶಬ್ದಭಂಡಾರಕ್ಕೇನೂ ಕೊರತೆ ಇರುವುದಿಲ್ಲ. ಜಾಯುಸಿಯ ಎಲ್ಲ ಸಾಹಿತ್ಯ ಸಂಸ್ಕೃತಿಯ ಜ್ಞಾನವು, ಅವರ ಅಪರಿಮಿತ ತಿರುಗಾಟದ ಅನುಭವಗಳಿಂದಲೇ ಬಂದಿರುವಂಥವಾಗಿದ್ದವು. ಅವರು ಸತ್ಸಂಗದಿಂದ ಬಹುಶ್ರುತರಾಗಿದ್ದರು. ಅವರು ಕಾವ್ಯ ಬರೆಯಲು ಪ್ರಾರಂಭಿಸಿದ್ದು ತಮ್ಮ ೩೦ ವರ್ಷ ವಯಸ್ಸಿನ ನಂತರವೇ. ಕಾವ್ಯ ಪರಂಪರೆಯ ಜ್ಞಾನ ತಿಳುವಳಿಕೆಗಳು ಖಂಡಿತವಾಗಿ ಅವರು ಯಾರಾದರೊಬ್ಬ ಕವಿಯಿಂದಲೇ ತಿಳಿದಿದ್ದಿರಬೇಕು. ಭಾಷೆಯ ಸೂಕ್ಷ್ಮತೆ ಪ್ರಯೋಗಶೀಲತೆ, ಕಾವ್ಯ ಭಾಷೆಯ ಒಳನೋಟ ಇವುಗಳನ್ನು ತಿಳಿಯಲು ಕವಿಗಳ ಸಂಗ ದೊರಕಿರಲೇಬೇಕು. ಆದರೆ ಇವರಿಗೆ ಛಂದಶಾಸ್ತ್ರದ ಬಗೆಗೆ, ಪರಂಪರಾಗತ ಅಭ್ಯಾಸಗಳ ವಿಸ್ತೃತ ಅಧ್ಯಯನದ ಕೊರತೆ ಇರುವುದು ಕಂಡುಬರುತ್ತದೆ. ತೀರ ಸಾಧಾರಣವಾದ ಛಂದಃದ ಪ್ರಯೋಗಗಳಿವೆ. ತಮ್ಮ 'ಪದಮಾವತ್'ನಲ್ಲಿ ದೋಹೆ (ಎರಡು ಸಾಲುಗಳ) ಚೌಪಾಯೀ (ನಾಲ್ಕು ಸಾಲುಗಳ) ಮುಂತಾದ ಸರಳ ಛಂದಸ್ಸುಗಳ ಪ್ರಯೋಗ ಮಾಡಿದ್ದಾರೆ. ಅವರ ಬರವಣಿಗೆಗಳ ಮೇಲೆ ಪಾರಸಿಯ ಮಾನಸವೀ ಪರಂಪರೆಯ ಪ್ರಭಾವ ಅಪಾರವಾಗಿದೆ.

ಹಾಗೇ ಜಾಯಸಿಯವರು ಸಂಸ್ಕೃತ ಕವಿಗಳಂತೆ ವರ್ಣನೆಯನ್ನು ನಖ-ಶಿಖವಾಗಿ ವರ್ಣಿಸುವುದಿಲ್ಲ, ಪಾರಸೀ ಕವಿಗಳ ರೀತಿಯಲ್ಲಿ ಶಿಖದಿಂದ ಪ್ರಾರಂಭಿಸುತ್ತಾರೆ, ಅಂದರೆ ಶಿಖ-ನಖ ವರ್ಣನೆಯನ್ನು ಕಾಣುತ್ತೇವೆ. ಆದ್ದರಿಂದ ಜಾಯಸಿ ಅವರಿಗೆ ಸೂಫೀ ಸಂತರ ಒಡನಾಟದ ಪ್ರಭಾವ ದಿಂದ ಫಾರಸೀ ಕಾವ್ಯಗಳ ಆಳ ಅಧ್ಯಯನ ಸಾಧ್ಯವಾಗಿರಬೇಕು.

ಜಾಯಸೀ ಮುಸಲ್ಮಾನರಾಗಿದ್ದರೂ ತಮ್ಮ ಕಾವ್ಯದಲ್ಲಿ ಹಿಂದೂ ಪೌರಾಣಿಕ ಜ್ಞಾತಿಯನ್ನು ಮೆರೆದಿದ್ದಾರೆ. ಇದು ಅವರಿಗೆ ಸತ್ಸಂಗ ದಿಂದ ಲಭ್ಯವಾಗಿರಬೇಕು. ಮೌಖಿಕ ಪರಂಪರೆಯಲ್ಲಿ ಇವರು ಅಪಾರ ವಾದ ಜ್ಞಾನ ಸಂಪಾದಿಸಿದ್ದಾರೆ. ಭಾರತೀಯ ಪುರಾಣಗಳ ಸಂಗತಿ ಗಳನ್ನು ತಮ್ಮ ಕಾವ್ಯದಲ್ಲಿ ಬಳಸಿಕೊಳ್ಳುವಾಗ ಪ್ರಕಟಗೊಂಡಿರುವ ಕೆಲವು ತಪ್ಪು ತಿಳುವಳಿಕೆಗಳು, ಅವರು ಇವುಗಳನ್ನು ಓದಿ ತಿಳಿಯುವ ಅಭ್ಯಾಸದಲ್ಲಿ ಇರಲಿಲ್ಲವೆಂಬುದನ್ನು ಸಾರುತ್ತವೆ. ಕುರಾನಿನ ಸಂಗತಿ ಗಳೂ ಭಾರತೀಯ ಸಂಸ್ಕೃತಿಯ ತಿಳುವಳಿಕೆಗಳೂ ಪದಮಾವತ್‌ನಲ್ಲಿ ಜೊತೆಜೊತೆಯಾಗಿಯೇ ಕಾಣುತ್ತವೆ.

ಜಾಯಸಿಯು ತಮ್ಮ ಗ್ರಂಥ ಪದಮಾವತ್‌ನಲ್ಲಿ ತಿಳಿಸಿರುವಂತೆ ಅವರು ಮಲ್ಲಿಕ್ ಮಹಮದ್ ನಿಜಾಮುದ್ದೀನ್ ಔಲಿಯಾ ಅವರ ಶಿಷ್ಯ ಪರಂಪರೆಯಲ್ಲಿ ಬಂದಿರುವವರಾಗಿದ್ದಾರೆ. ಜಾಯಸಿಯವರು ತಮ್ಮ ಗುರು ಪರಂಪರೆಯನ್ನು ವಿಷದವಾಗಿ ತಿಳಿಸುತ್ತಾರೆ.

ಮಲ್ಲಿಕ್ ಮುಹಮ್ಮದ್ ನಿಜಾಮುದ್ದೀನ್ ಔಲಿಯಾ

↓

ಸೈಯದ್ ಅಶರಫ್

↓

ಶೇಖ್ ಹಾಜೀ

↓

ಶೇಖ್ ಮುಬಾರಕ್ + ಶೇಖ್ ಕಮಾಲ್

↓

ಸೈಯದ್ ರಾಜೇ

↓

ಶೇಖ್ ದನಿಯಾಲ್

↓

ಸೈಯದ್ ಮುಹಮ್ಮದ್

↓

ಶೇಖ್ ಅಲಹಾದಾದ್

↓

ಶೇಖ್ ಬುರಹಾನ್

↓

ಶೇಖ್ ಮೊಹಿಯುದ್ದೀನ್

↓

ಮಲ್ಲಿಕ್ ಮುಹಮ್ಮದ್ ಜಾಯಸೀ

ಜಾಯಸಿಯವರು ಕೊಟ್ಟ ಈ ಗುರು ಪರಂಪರೆಯು ಮುಸಲ್ಮಾನರಲ್ಲಿ ಪ್ರಚಲಿತವಾದ ಗುರು ಪರಂಪರೆಗಿಂತ ತುಂಬ ಭಿನ್ನವಾಗಿದೆ. ಜಾಯಸಿಯವರು ತಮ್ಮ ಪದಮಾವತ್‌ನಲ್ಲಿ ತಮ್ಮ ನಾಲ್ಕು ಆಪ್ತ ಮಿತ್ರರ ಉಲ್ಲೇಖವನ್ನೂ ಮಾಡಿದ್ದಾರೆ. ಯೂಸುಫ್ ಮಲ್ಲಿಕ್, ಸಲಾರ್ ಕಾದಿರ್, ಸಲೋನೆ ಮಿಯಾಂ ಮತ್ತು ಬಡೇಶೇಖ್. ಅವರಲ್ಲಿ ಯೂಸುಫ್ ಮಲ್ಲಿಕ್ ಮತ್ತು ಸಲೋನೆ ಮಿಯಾಂ ಇಬ್ಬರೂ ಗಾಜೀಪುರ ಮತ್ತು ಭೋಜಪುರದ ಮಹಾರಾಜ ಜಗತದೇವ (ಕ್ರಿ.ಶ. ೧೫೭೪)ನ ಆಶ್ರಯದಲ್ಲಿದ್ದವರು.

ಜಾಯಸಿ ಅವರೇ ತಮ್ಮ 'ಆಖಿರೀ ಕಲಾಮ್' ಎಂಬ ಗ್ರಂಥದಲ್ಲಿ ತಮ್ಮ ಜನನದ ಬಗ್ಗೆ ಕೆಲವು ವಿಷಯಗಳನ್ನು ತಿಳಿಸುತ್ತಾರೆ. ಆ ಕಾಲ

ದಲ್ಲಿ ಒಂದು ದೊಡ್ಡ ಭೂಕಂಪವಾಯಿತಂತೆ, ಅದು ಸುಮಾರು ಹಿಜರಿ ೯ನೇ ಶತಮಾನ ಎಂದು ಹೇಳುತ್ತಾರೆ ಮತ್ತು ಜಾಯಸಿಯೇವರು ಮುದಿತನದ ಎಲ್ಲ ಅವಸ್ಥೆಗಳನ್ನು ಅನುಭವಿಸಿದವರೆಂದು 'ಪದಮಾವತ್' ಕಾವ್ಯದಲ್ಲಿ ಹೇಳಿಕೊಂಡಿದ್ದಾರೆ. ಕೆಲವು ವಿದ್ವಾಂಸರ ಪ್ರಕಾರ ಕ್ರಿ. ಶ. ೧೫೪೨ರಲ್ಲಿ ಜಾಯಸಿಯುವರು ಮರಣ ಹೊಂದಿದರೆಂದು ತಿಳಿದುಬರುತ್ತದೆ. ಹಾಗಾಗಿ ಅವರು ಕ್ರಿ. ಶ. ೧೪೭೦ರ ಸುಮಾರಿನಲ್ಲಿ ಹುಟ್ಟಿದ್ದಿರಬಹುದು.

ಅಧ್ಯಾಯ ೪

ಪದಮಾವತ್

೧. ಸ್ತುತಿ ಖಂಡ

"ಎಲ್ಲಕ್ಕಿಂತ ಮೊದಲು ಈ ಜಗತ್ತನ್ನು ನಿರ್ಮಿಸಿ, ಜೀವಾತ್ಮನನ್ನು ಮೂಡಿಸಿದ ಸೃಷ್ಟಿಯ ರಚಯಿತನಾದ ಆ ಪರಮಾತ್ಮನನ್ನು ಸ್ಮರಿಸುತ್ತೇನೆ. ಅವನು ಮೊದಲು ಒಂದು ಜ್ಯೋತಿಯ ಪ್ರಕಾಶವನ್ನು ರಚಿಸಿ, ಅಂದರೆ ಮಹಮದ್ ಸಾಹೆಬರನ್ನು ಸೃಷ್ಟಿಸಿ, ಅವರ ಆನಂದಕ್ಕಾಗಿ ಸ್ವರ್ಗವನ್ನು ಸೃಷ್ಟಿಸಿದ. ಅವನು ಅಗ್ನಿ, ಗಾಳಿ, ನೀರು ಮತ್ತು ಮಣ್ಣು ಮುಂತಾದ ನಾಲ್ಕು ತತ್ವಗಳ ರಚನೆಯನ್ನು ಮಾಡಿ ಜೊತೆಗೇ ವಿವಿಧ ಬಣ್ಣಗಳಿಂದಾದ ಚಿತ್ರವನ್ನು ತಯಾರಿಸಿದ. ಅವನು ಪೃಥ್ವಿ, ಸ್ವರ್ಗ ಮತ್ತು ಪಾತಾಳವನ್ನು ನಿರ್ಮಿಸಿದ. ತರಹ ತರಹದ ಅವತಾರಗಳಲ್ಲಿ ಹುಟ್ಟಿಬಂದ ಅವನು, ಏಳು ದ್ವೀಪಗಳು, ಬ್ರಹ್ಮಾಂಡ, ಹದಿನಾಲ್ಕು ಪ್ರದೇಶಗಳು, ಒಂಭತ್ತು ಖಂಡಗಳು, ದಿನ, ರಾತ್ರಿ, ಸೂರ್ಯ, ಚಂದ್ರ, ನಕ್ಷತ್ರ, ತಾರಾಗಣಗಳ ಪಂಕ್ತಿಗಳು, ಧೂಳು, ಥಂಡಿ, ಸೆರಳು, ಮೋಡ, ಮಿಂಚು ಮುಂತಾದ ವಸ್ತುಗಳ ರಚನೆಯನ್ನು ಈ ಸೃಷ್ಟಿಯಲ್ಲಿಯೇ ನಿರ್ಮಾಣಗೊಳ್ಳುವಂತೆ ಮಾಡಿದ.

ಈಶ್ವರ ಸೃಷ್ಟಿಸಿದ ಈ ರಚನೆ ಮೋರವಾಗಿ ಬೇರಿನ್ನೇನೂ

ಶೋಭೆಯನ್ನು ಈ ಜಗತ್ತಿಗೆ ತರಲಾರವು, ಆದ್ದರಿಂದ ಮೊದಲಿಗೆ ಈಶ್ವರನನ್ನು ನನೆದು ನಂತರ ಪದಮಾವತ್ ಎಂಬ ಗಂಭೀರ ಕಥೆಯ ವರ್ಣನೆಯನ್ನು ಮಾಡುತ್ತೇನೆ, ಎಂದು ಹೇಳುತ್ತಾ ಜಾಯಸಿಯವರು ಬಗೆಬಗೆಯಾಗಿ ಪರಮೇಶ್ವರನ ಸ್ತುತಿ ಮಾಡಿ, ಅವನ ಸೃಷ್ಟಿ ಸೌಂದರ್ಯ ವನ್ನು ವರ್ಣಿಸಿ, ಮಹಮ್ಮದ್ ಪೈಗಂಬರ್ ಮತ್ತು ಅವರ ನಾಲ್ವರು ಮಿತ್ರರನ್ನು ಕುರಿತು ವರ್ಣಿಸಿ. ದೆಹಲಿಯ ಸಾಮ್ರಾಟನಾದ ಶೇರ್ ಶಾಹನ ರೂಪ, ಗುಣ, ಯಶಸ್ಸು ಮತ್ತು ನ್ಯಾಯಗಳನ್ನು ವರ್ಣಿಸಿ, ತಮ್ಮ ಗುರು ಪರಂಪರೆಯನ್ನು ತಿಳಿಸಿ, ತಮ್ಮ ಪರಿಚಯ, ತಮ್ಮ ನಾಲ್ವರು ಮಿತ್ರರುಗಳ ಪರಿಚಯ ಕೊಡುತ್ತಾ ಕೊನೆಯಲ್ಲಿ ಪದಮಾವತ್ ಕಥೆಯ ಸಾರವನ್ನು ಹೇಳುತ್ತಾರೆ. ತದನಂತರ......

೨. ಸಿಂಹಳದ್ವೀಪ ವರ್ಣನ ಖಂಡ

ಸಿಂಹಳ ಅತಿ ಸುಂದರವಾದ ದ್ವೀಪ. ಉಳಿದ ಎಲ್ಲ ದ್ವೀಪಗಳಿಗಿಂತಲೂ ಇದು ಸೌಂದರ್ಯದಲ್ಲಿ ಒಂದು ಪಟ್ಟು ಮಿಗಿಲೇ ಸರಿ, ಸ್ವರ್ಗ ಸಮಾನವಾದ ದ್ವೀಪವಿದು. ಇಲ್ಲಿ ದಟ್ಟವಾದ ಮಾವಿನ ತೋಪುಗಳಿವೆ, ವಿವಿಧ ಸುಗಂಧ ಸೂಸುವ ಹೂವುಗಳ ಮರಗಳು ತುಂಬಿ ನಿಂತಿವೆ. ಎಲ್ಲ ಮರಗಳೂ ಫಲ ಪುಷ್ಪಗಳನ್ನು ತುಂಬಿಕೊಂಡು ಬಾಗಿ ನಿಂತಿರುತ್ತವೆ. ತೊಳೆದಾಡುವ ತೆಂಗಿನ ಮರಗಳನ್ನು ಕಂಡರೆ ಇಂದ್ರನ ನಂದನವನವೇ ಇಲ್ಲಿರುವುದೇನೋ ಎನಿಸುತ್ತದೆ. ಪಶು, ಪಕ್ಷಿ, ಪ್ರಾಣಿಗಳು ವನಸಿರಿಗೆ ಶೋಭೆಯನ್ನು ತರುತ್ತವೆ. ಇಲ್ಲಿನ ಸ್ತ್ರೀಯರುಗಳು ಪದ್ಮಿನಿ ಜಾತಿಗೆ ಸೇರಿದವರುಗಳಾಗಿದ್ದಾರೆ, ಅತ್ಯಂತ ಸುಂದರ ಮನಮೋಹಕ ಮಾದಕ ಸೌಂದರ್ಯವನ್ನು ಹೊಂದಿರುತ್ತಾರೆ, ಈ ದ್ವೀಪದ ಯಶಸ್ವೀ ರಾಜ ಗಂಧರ್ವಸೇನ. ಅವನು ಚಕ್ರವರ್ತಿಯಾಗಿದ್ದನು. ಅವನ ಶೌರ್ಯ ಪ್ರತಾಪಗಳು ನಾಲ್ಕು ದಿಕ್ಕಿನಲ್ಲೂ ವಿಖ್ಯಾತವಾಗಿದ್ದಿತು. ಅವನ ಸೈನ್ಯ ಅಸಂಖ್ಯವಾಗಿದ್ದಿತು.

೩. ಜನ್ಮ ಖಂಡ

ಗಂಧರ್ವಸೇನ ಮಹಾರಾಜನ ಧರ್ಮಪತ್ನಿ ಚಂಪಾವತಿ. ಅವರಿಗೆ ಪದಮಾವತೀ ಎಂಬ ಅಪೂರ್ವ ಸುಂದರ ಮಗಳು ಹುಟ್ಟಿದ್ದಾಳೆ. ಕನ್ಯಾ ರಾಶಿಯಲ್ಲಿ ಹುಟ್ಟಿದ ಅವಳಿಗೆ ಪದಮಾವತಿ ಎಂದೇ ಹೆಸರಿಟ್ಟರು. ಅವಳಿಗೆ ಹನ್ನೆರಡು ವರ್ಷ ತುಂಬಿದಾಗ ಮೈನೆರೆದು ದೊಡ್ಡವಳಾದಳು. ರಾಜಾ ಗಂಧರ್ವಸೇನನು ಅವಳನ್ನು ಸಪ್ತ ಖಂಡಗಳ 'ಧವಳ ಗೃಹ'ದಲ್ಲಿರಲು ಏರ್ಪಾಟು ಮಾಡಿದನು. ಅವಳೊಡನೆ ಏಳುಜನ ಸಖಿಯರು, ಜೊತೆಗೇ ಒಂದು ಬುದ್ಧಿವಂತ ಗಿಳಿ. ಹಿರಾಮನ್ ಅದರ ಹೆಸರು. ಆ ಗಿಳಿ ಮಾತನಾಡುವ ಗಿಳಿ, ಅವಳಿಗೆ ಕಥೆ ಹೇಳುತ್ತಿತ್ತು, ಚರ್ಚೆ ಮಾಡುತ್ತಿತ್ತು, ಬುದ್ಧಿ ತಿಳುವಳಿಕೆ ನೀಡುತ್ತಿತ್ತು. ಪದಮಾವತಿಯು ಯೌವನ ತುಂಬಿ ನಿಂತರೂ ಅವಳಿಗೆ ಮದುವೆ ಮಾಡುವ ಯೋಚನೆಯನ್ನೇನೂ ರಾಜನು ಮಾಡಲಿಲ್ಲ. ನಿರಾಶಳಾದ ಪದ್ಮಾವತಿಯು ಒಂದುದಿನ ಹೀರಾಮನ್‌ಗೆ ತನ್ನ ಮನೋವ್ಯಥೆಯನ್ನು ನಿವೇದಿಸಿಕೊಂಡಳು— "ಪ್ರಿಯ ಗಿಳಿಯೇ, ದಿನ ಕಳೆದಂತೆ ಮನ್ಮಥನು ನನ್ನನ್ನು ಹಿಂಸಿಸುತ್ತಿದ್ದಾನೆ. ನನ್ನ ತಂದೆಯೋ ನನಗೆ ಮದುವೆ ಮಾಡುತ್ತಿಲ್ಲ" ಆಗ ಹೀರಾಮನ್ ಹೇಳಿದ— 'ಯಾರ ಭಾಗ್ಯದಲ್ಲಿ ಏನು ಬರೆದಿರುವುದೋ ಹಾಗೇ ಆಗುತ್ತದೆ. ನೀನು ಆಜ್ಞಾಪಿಸಿದರೆ ದೇಶ ವಿದೇಶಗಳಿಗೆ ತಿರುಗಿ ನಿನಗಾಗಿ ಯೋಗ್ಯ ವರನನ್ನು ಹುಡುಕುತ್ತೇನೆ". ಇವರಿಬ್ಬರ ಈ ಮಾತುಗಳನ್ನು ಕೇಳಿಸಿಕೊಂಡ ಒಬ್ಬ ಸಖಿ ರಾಜನಿಗೆ ಹೋಗಿ ಚಾಡಿ ಹೇಳಿದಳು. ರಾಜನಿಗೆ ಕೋಪಬಂದು ಹೀರಾಮನ್‌ನನ್ನು ಕೊಲ್ಲಲು ಆಜ್ಞಾಪಿಸಿದ. ಪದಮಾವತಿಯು ಗಿಳಿಯನ್ನು ಬಚ್ಚಿಟ್ಟು ಅದನ್ನು ಕಾಪಾಡಿದಳು. ಹೀರಾಮನ್ ಎಷ್ಟು ವಿನಂತಿಸಿಕೊಂಡರೂ ಅದನ್ನು ತೊರೆಯಲು ಇಚ್ಛೆಪಡಲಿಲ್ಲ.

೪. ಮಾನಸ ಸರೋದಕ ಖಂಡ

ಒಂದು ಹುಣ್ಣಿಮೆಯ ದಿನ ಪದಮಾವತಿಯು ತನ್ನ ಸಖಿಯ

ರೊಂದಿಗೆ ಜಲಕ್ರೀಡೆಗಾಗಿ ಮಾನಸಸರೋವರಕ್ಕೆ ಹೋದಳು. ಆಕೆಯ ರೂಪ ಕಂಡು ಮಾನಸಸರೋವರವೂ ಮೋಹಗೊಂಡಿತು. ಸಖಿಯರೆಲ್ಲ ನೀರಿನಲ್ಲಿ ಆಟವಾಡುತ್ತಿದ್ದರು. ಸೋತವಳು ತನ್ನ ಹಾರವನ್ನು ಕೊಡುವ ಕರಾರಿಗೆ ಸಾಕ್ಷಿಯಾಗಿ ಪದಮಾವತಿಯನ್ನು ಕೂರಿಸಿದರು. ಆಟ ತಿಳಿಯದ ಮುಗ್ಧ ಸಖಿಯೊಬ್ಬಳ ಹಾರ ಕಳೆದುಹೋಯಿತು. ಗಾಬರಿಯಿಂದ ಎಲ್ಲರೂ ಹಾರದ ಹುಡುಕಾಟದಲ್ಲಿರುವಾಗ, ಸರೋವರವೇ ಕರುಣೆಯಿಂದ ಹಾರವನ್ನು ತೇಲಿಬಿಟ್ಟಿತು.

೫. ಸುಆ (ಗಿಳಿ) ಖಂಡ

ಅತ್ತ ಪದಮಾವತಿ ನೀರಿನೊಡನೆ ಆಡುತ್ತಿರುವಾಗ ಇತ್ತ ಹೀರಾಮನ್‌ನನ್ನು ಒಂದು ಬೆಕ್ಕು ಹಿಡಿಯಲು ಹವಣಿಸಿ ಪಂಜರದ ಬಾಗಿಲನ್ನು ತೆರೆಯಿತು. ಅದೇ ಸಮಯ ಕಾದ ಹೀರಾಮನ್ ಪಂಜರದಿಂದ ತಪ್ಪಿಸಿಕೊಂಡು ಕಾಡಿನ ಕಡೆಗೆ ಹಾರಿಹೋಯಿತು. ಕಾಡಿನ ಪಕ್ಷಿಗಳೆಲ್ಲ ಅದನ್ನು ಸ್ವಾಗತಿಸಿದವು, ತಿನ್ನಲು ನೀಡಿದವು, ತಮ್ಮೊಡನೆ ಸೇರಿಸಿಕೊಂಡವು. ಒಂದು ದಿನ ಬೇಟೆಗಾರರ ಕೈಗೆ ಸಿಕ್ಕಿಬಿದ್ದಿತು ಈ ಹೀರಾಮನ್.

೬. ರತ್ನಸೇನನ ಜನ್ಮಖಂಡ

ಚಿತ್ತೂರ್‌ಗಢದ ರಾಜ ಚಿತ್ರಸೇನ, ಅವನ ಮಗ ರತ್ನಸೇನ. ಅವನು ಹುಟ್ಟಿದಾಗಲೇ ಜೋತಿಷಿಗಳು ಅವನು ಅಪರಿಮಿತ ಪರಾಕ್ರಮಿ ರಾಜನಾಗುವುದಾಗಿ ಭವಿಷ್ಯ ನುಡಿದರು. ಜೋಗಿ ವೇಷದಲ್ಲೀತ ಸಿಂಹಳ ದ್ವೀಪಕ್ಕೆ ಹೋಗಿ ಪದಮಾವತಿಯನ್ನು ಮದುವೆಯಾಗಿ ಹಿಂತಿರುಗುತ್ತಾನೆ. ಹಾಗೂ ಭೋಜರಾಜ – ವಿಕ್ರಮಾದಿತ್ಯರುಗಳಂತೆ ಕೀರ್ತಿವಂತನೂ ಐಶ್ವರ್ಯಗಳನ್ನು ಸಂಪಾದಿಸುತ್ತಾನೆ ಎಂದೆಲ್ಲಾ ನುಡಿದರು.

೭. ವನಿಜರಾ (ವ್ಯಾಪಾರ) ಖಂಡ

ಚಿತ್ತೂಡ್‌ಗಢದ ಒಬ್ಬ ಅಲಿಮಾರಿಯು ಒಮ್ಮೆ ವ್ಯಾಪಾರದ ನಿಮಿತ್ತ ಸಿಂಹಳ ದ್ವೀಪಕ್ಕೆ ಹೊರಟ. ಅವನೊಡನೆ ಒಬ್ಬ ಬಡ ಬ್ರಾಹ್ಮಣನೂ ಹೊರಟ. ವ್ಯಾಪಾರ ಮತ್ತು ಹಣಗಳಿಕೆಯ ಆಸೆಯಲ್ಲಿ ಇತರರಿಂದ ಸಾಲ ಪಡೆದು ವ್ಯಾಪಾರ ಮಾಡಲು ಈ ಬ್ರಾಹ್ಮಣನು ಯೋಚಿಸಿದ. ಸಿಂಹಳ ದ್ವೀಪದ ಮಾರುಕಟ್ಟೆಯೋ ಅತ್ಯಂತ ಅಮೂಲ್ಯ ವಸ್ತುಗಳಿಂದ ತುಂಬಿರುವಂಥಾದ್ದು, ಸುಲಭ ಬೆಲೆಯಲ್ಲಿ ಕೊಳ್ಳಲಸಾಧ್ಯವಾದುದು. ಕೊಳ್ಳಲಾಗದೇ ಬ್ರಾಹ್ಮಣನು ದುಃಖಿತ ನಾಗಿರುವಾಗ ಬೇಟೆಗಾರನೊಬ್ಬನ ಬಳಿ ಇದ್ದ ಗಿಳಿಯೊಂದನ್ನು ಕಂಡು, ಆಸೆ ಬಂದು ಅದನ್ನೇ ಕೊಂಡುಕೊಂಡನು. ವ್ಯಾಪಾರಗಾರರೆಲ್ಲರೂ ಚಿತ್ತೂಡ್‌ಗಢಕ್ಕೆ ಹಿಂತಿರುಗುವ ವೇಳೆಗಾಗಲೇ ಚಿತ್ರಸೇನನು ಮರಣ ಹೊಂದಿ ಅವನ ಪುತ್ರ ರತ್ನಸೇನನು ಸಿಂಹಾಸನವೇರಿದ್ದಾನೆ. ಅವನು ಸಿಂಹಳದಿಂದ ಬಂದ ವ್ಯಾಪಾರಿಗಳ ಬಳಿ ಇರುವ ಅಮೂಲ್ಯ ವಸ್ತುಗಳ ಬಗ್ಗೆ, ಅದರೊಡನೆ ಇರುವ ಒಂದು ವಿಚಿತ್ರ ಗಿಳಿಯ ಸಂಗತಿಯನ್ನೂ ಕೇಳಿ ತಿಳಿಯುತ್ತಾನೆ. ಅದನ್ನು ತನ್ನ ಬಳಿ ತರಿಸಿಕೊಂಡು, ಅದ ರೊಡನೆ ಮಾತನಾಡಲು ಇಚ್ಛೆಯಾಗಿ ಅದಕ್ಕೆ ತನ್ನ ಪರಿಚಯ ತಿಳಿಸು ವಂತೆ ಕೇಳಿದಾಗ—ಅದು ತಾನು ಬುದ್ಧಿವಂತನೂ, ವೇದಶಾಸ್ತ್ರಗಳನ್ನು ಬಲ್ಲ ಪಂಡಿತನೂ. ಸಿಂಹಳದ ಸುಂದರಿ ಪದ್ಮಾವತಿಯನ್ನು ನಿನಗೆ ಭೇಟಿ ಮಾಡಿಸಲು ಇಚ್ಛೆಪಡುವವನೂ ಎಂದೆಲ್ಲ ಹೇಳಿತು. ಅದನ್ನು ಕೇಳಿ ಅತ್ಯಂತ ಸಂತೋಷದಿಂದ ಆ ಗಿಳಿಯನ್ನು ತಂದ ಬ್ರಾಹ್ಮಣನಿಗೆ ಒಂದು ಲಕ್ಷ ಹಣವನ್ನು ಕೊಟ್ಟು ಕೊಂಡುಕೊಂಡನು.

೮. ನಾಗಮತಿ ಸುಆ (ಗಿಳಿ) ಖಂಡ

ರಾಜಾ ರತ್ನಸೇನನ ಪತ್ನಿ ನಾಗಮತಿ. ಅವಳು ಅತ್ಯಂತ

ಸುಂದರಿಯಾಗಿದ್ದಳು. ಒಮ್ಮೆ ರಾಜಾ ರತ್ನಸೇನನು ಬೇಟೆಯಾಡಲು ಕಾಡಿಗೆ ಹೋಗಿರುವಾಗ, ರಾಣಿ ನಾಗಮತಿಯು ಕೈಯಲ್ಲಿ ಕನ್ನಡಿ ಹಿಡಿದು ತನ್ನ ರೂಪದ ಬಗೆಗೇ ಹೆಮ್ಮೆ ಪಡುತ್ತಾ, ಹೀರಾಮನ್‌ನನ್ನು ಕೇಳಿದಳು— "ಗಿಳಿಯೇ, ನೀನು ಸಿಂಹಳ ದ್ವೀಪದ ಸ್ತ್ರೀಯರನ್ನು ನೋಡಿರುವೆಯಾ, ಅಲ್ಲಿನ ಸ್ತ್ರೀಯರುಗಳಲ್ಲಿ ಯಾರಾದರೂ ನನಗಿಂತಲೂ ಸುಂದರಿಯಾಗಿರುವವರು ಇರುವರೇನು ?". ಆಗ ಆ ಗಿಳಿ ಪದಮಾವತಿಯನ್ನು ನೆನೆದು ನಸು ನಕ್ಕು ಹೇಳಿತು, "ಹಂಸವಿಲ್ಲದ ಸರೋವರದಲ್ಲಿ ಬಕ ಪಕ್ಷಿಯೇ ಹಂಸ ಅಲ್ಲವೇ, ಅಲ್ಲಿನ ಸ್ತ್ರೀಯರ ಬಗ್ಗೆ ಹೇಳುವುದಾದರೆ, ಅವರೆಲ್ಲರೂ ನಿನಗಿಂತ ಬಹಳ ಸುಂದರಿಯರು ಹಾಗೂ ಪ್ರಿಯತಮನಿಂದ ಪ್ರೇಮಿಸಲ್ಪಡುವವಳೇ ನಿಜವಾದ ಸುಂದರಿಯಾಗಿರುತ್ತಾಳೆ". ಎಂದೆಲ್ಲಾ ಹೇಳಿದುದನ್ನು ಕೇಳಿಸಿಕೊಂಡ ನಾಗಮತಿಯು ಕೋಪಗೊಂಡಳು. ಎಂದಾದರೊಮ್ಮೆ ರಾಜಾ ರತ್ನಸೇನನಿಗೆ ಈ ಗಿಳಿ ಹೀಗೆಲ್ಲಾ ಹೇಳಿದರೆ ಆತ ವಿಯೋಗಿಯಾಗಿ ನನ್ನನ್ನು ಬಿಟ್ಟು ಹೋಗುವನೆಂದು ಯೋಚಿಸಿ, ಗಿಳಿಯನ್ನು ಕೊಲ್ಲಲು ಆಜ್ಞೆ ಮಾಡುವಳು. ಆದರೆ ದಯಾಮಯರಾದ ಕಟುಕರು ಕೊಲ್ಲದೇ ಗಿಳಿಯನ್ನು ಅವಿತಿಡುತ್ತಾರೆ. ಬೇಟೆಯಿಂದ ಹಿಂತಿರುಗಿದ ರಾಜನು ಗಿಳಿಯ ಬಗ್ಗೆ ವಿಚಾರಿಸಿದಾಗ ಅದನ್ನು ಕೊಲ್ಲಲು ರಾಣಿ ಆಜ್ಞಾಪಿಸಿದ್ದ ವಿಷಯ ತಿಳಿದು ದುಃಖಿಸುತ್ತಾನೆ. ಆಗ ಕಟುಕರು ಅದನ್ನು ರಾಜನಿಗೆ ತಂದೊಪ್ಪಿಸುತ್ತಾರೆ.

೬. ರಾಜಾ–ಸು ಆ ಸಂವಾದ ಖಂಡ

ಸಂತೋಷಗೊಂಡ ರಾಜನು ಗಿಳಿಯೊಡನೆ ಮಾತನಾಡುತ್ತಾ, ಸತ್ಯಸಂಗತಿಯನ್ನು ತಿಳಿಸುವಂತೆ ಕೇಳಿದನು. ಗಿಳಿಯು ತಾನು ನಾಗಮತಿ ರಾಣಿಗೆ ಹೇಳಿದಂತೆ ಸಿಂಹಳದ ಸ್ತ್ರೀಯರುಗಳ ಸೌಂದರ್ಯದ ಬಗ್ಗೆ, ವಿಶೇಷವಾಗಿ ಪದಮಾವತಿಯ ರೂಪಗುಣಗಾನ ಕೇಳಿ ವಿಸ್ಮಯ

ವಾಗುತ್ತದೆ. ಮುಗ್ಧನಾಗಿ ತಾನು ಅವಳನ್ನು ಅವಶ್ಯವಾಗಿ ಪಡೆದೇ ತೀರುವೆನೆಂದು ಹೇಳುವನು.

೧೦. ನಖ-ಶಿಖ ವರ್ಣನ ಖಂಡ

ಗಿಳಿಯು ರಾಜನ ಆಸಕ್ತಿಯನ್ನು ಕಂಡು, ಪದಮಾವತಿಯ ಸೌಂದರ್ಯವನ್ನು ಶಿಖದಿಂದ ನಖದವರೆಗೆ ವಿವರವಾಗಿ ಪ್ರೀತಿಯುತ ವಾಗಿ ವರ್ಣಿಸಿತು.

೧೧. ಪ್ರೇಮಖಂಡ

ಪದಮಾವತಿಯ ನಖ-ಶಿಖದ ವರ್ಣನೆಯನ್ನು ಕೇಳಿದ ರಾಜ ಮೂರ್ಛಿತನಾಗುತ್ತಾನೆ. ಅವನಿಗೆ ಅನೇಕ ಉಪಚಾರಗಳನ್ನು ಮಾಡಿದ ನಂತರ ತಿಳಿವು ಬಂದು ಎಚ್ಚೆತ್ತರೂ, ಅಳಲಾರಂಭಿಸಿದನು. ಅಳುತ್ತಾ ಅಳುತ್ತಾ ತಾನು ಇಲ್ಲಿಯವರೆಗೂ ಅಮರಾಪುರಿಯಲ್ಲಿದ್ದೆ- ಇಲ್ಲಿಗೆ ಹೇಗೆ ಬಂದೆ ಎಂದೆಲ್ಲ ಬಡಬಡಿಸಿದನು. ಅವನನ್ನು ಬಹುವಾಗಿ ಸಮಾ ಧಾನ ಮಾಡಿ ಗಿಳಿಯೂ ಹೇಳಿತು, "ರಾಜನೇ, ನೀನು ರಾಜ್ಯದ ಸುಖ ಭೋಗಗಳನ್ನು ಅನುಭವಿಸುತ್ತಿರುವವನು. ಪ್ರೇಮದ ಕಠಿಣಮಾರ್ಗ ದಲ್ಲಿ ನಡೆಯಲು ಅಶಕ್ತನು. ಅದಕ್ಕೆ ಸಾಧನೆ ಬೇಕು ಅದು ನಿನ್ನಲ್ಲಿಲ್ಲ". ಈ ಮಾತುಗಳನ್ನು ಕೇಳಿದ ರಾಜನಿಗೆ ಮನಸ್ಸು ದೃಢವಾಯಿತು.

೧೨. ಜೋಗಿ ಖಂಡ

ದೃಢವಾದ ಮನಸ್ಸಿನಿಂದ ರಾಜಾ ರತ್ನಸೇನನು ನಿದ್ರಾಹಾರ ಗಳನ್ನು ತೊರೆದು ಯೋಗಿಯಾದನು. ಪದಮಾವತಿಯನ್ನು ಕಾಣಲು

ಸಿಂಹಳ ದ್ವೀಪದ ಕಡೆಗೆ ಹೊರಟನು. ಜೋತಿಷಿಗಳು ಶುಭಮುಹೂರ್ತಕ್ಕೆ ಕಾಯಲು ಹೇಳಿದರೂ ಕೇಳದೇ ಹೊರಟನು, ತಾಯಿ, ಹೆಂಡತಿಯರುಗಳ ಕಣ್ಣೀರಿನ ಮಾತುಗಳಿಗೆ ಕಿವಿಗೊಡದೇ ಗಿಳಿಯೊಡನೆ ಹೊರಟನು, ಅವನ ಹಿಂದೆ ಹದಿನಾರು ಸಾವಿರ ಜನ ಸೈನಿಕರು ಹೊರಟರು.

೧೩. ರಾಜ–ಗಜಪತಿಯರ ಸಂವಾದ ಖಂಡ

ರಾಜಾ ರತ್ನಸೇನನು ಒಂದು ತಿಂಗಳ ಕಾಲ ನಡೆದು, ಅನೇಕ ಕಷ್ಟಗಳನ್ನು ದಾಟಿ ಸಮುದ್ರ ದಡಕ್ಕೆ ಬಂದು ತಲುಪಿದ. ಅಲ್ಲಿನ ರಾಜನಾದ ಗಜಪತಿಯನ್ನು ಭೇಟಿ ಮಾಡಿದ. ಗಜಪತಿ ರತ್ನಸೇನನನ್ನು ಬರಮಾಡಿ ಆದರಿಸಿದ. ತಾನು ಸಿಂಹಳಕ್ಕೆ ಹೋಗಬೇಕೆಂದೂ, ಸಮುದ್ರವನ್ನು ದಾಟಲು ಹಡಗೊಂದು ಬೇಕಾಗಿದೆಯೆಂದೂ ರತ್ನಸೇನನು ಗಜಪತಿಯನ್ನು ಕೇಳಿದ. ಆಗ ಗಜಪತಿಯು ಸಮುದ್ರದಲ್ಲಿ ಪ್ರಯಾಣ ಸುಖಕರವಲ್ಲ, ಸಿಂಹಳಕ್ಕೆ ಹೋಗುವುದು ತರವಲ್ಲ ಎಂದೆಲ್ಲಾ ತಿಳಿಹೇಳಿದರೂ ಕೇಳದೇ ಬದಲಾಗಿ ರತ್ನಸೇನನು ಪ್ರೇಮ ಮಾರ್ಗವನ್ನು ಕುರಿತು ಹೇಳಿದನು. ಎಂಥ ಕಷ್ಟಕ್ಕೂ ಸೈ ಎಂದು ದೃಢಚಿತ್ತನಾಗಿ ಕೇಳಿದಾಗ ಗಜಪತಿಗೆ ಸಹಾಯ ಮಾಡುವ ಮನಸ್ಸಾಯಿತು.

೧೪. ಬೋಹಿತ (ಹಡಗು) ಖಂಡ

ರತ್ನಸೇನನ ಮನಸ್ಸಿನ ದೃಢತೆಗೆ ಮೆಚ್ಚಿ ಗಜಪತಿಯು ಹಡಗನ್ನು ಕೊಟ್ಟನು. ಎಲ್ಲರೂ ಹಡಗಿನಲ್ಲಿ ಪ್ರಯಾಣ ಬೆಳೆಸಿದರು.

೧೫. ಸಾತ್ ಸಮುಂದರ್ (ಏಳುಸಮುದ್ರ) ಖಂಡ

ಸತ್ಯವನ್ನೇ ನಂಬಿದ ರಾಜನ ಮನಸ್ಸಿನಲ್ಲಿ ಸಿಂಹಳದ ಪದಮಾವತಿ ಬಿಟ್ಟರೆ ಬೇರೊಂದಿರಲಿಲ್ಲ. ಅವರೆಲ್ಲ, ಕ್ಷಾರ, ಕ್ಷೀರ, ದಧಿ, ಉದಧಿ,

ಸುರಾ, ಕಿಲಕಿಲಾ ಎಂಬ ಆರು ಸಮುದ್ರಗಳನ್ನು ದಾಟಿ ಏಳನೇ ಸಮುದ್ರವಾದ ಮಾನಸಸರೋವರಕೆ ಬಂದಂತೆ ಆನಂದತುಂದಿಲರಾದರು.

೧೬. ಸಿಂಹಳ ದ್ವೀಪ ಖಂಡ

ಮಾನಸಸರೋವರವನ್ನು ದಾಟಿ ಸಿಂಹಳ ದ್ವೀಪಕ್ಕೆ ಎಲ್ಲರೂ ಬಂದಿಳಿದರು. ದ್ವೀಪದ ಸೌಂದರ್ಯವನ್ನು ಕಂಡ ರಾಜನು ಗಿಳಿಗೆ ಕೇಳಿದನು. "ಓ ಸುಗುಣ ಗುರುವೇ ನಾವು ಯಾವ ಸುಂದರ ಪ್ರದೇಶವನ್ನು ಸೇರಿದ್ದೇವೆ?" ಗಿಳಿಯು ಅದು ಸಿಂಹಳವೆಂದೂ, ಅಲ್ಲಿನ ಕೋಟೆಯು ಅಭೇದ್ಯವೆಂದೂ, ಪದಮಾವತಿಯ 'ಧವಳ ಗೃಹ'ವು ಅತಿ ರಕ್ಷಿತವೆಂದೂ, ಅಲ್ಲಿಯೇ ಕಾಡಿನಲ್ಲಿರುವ ಶಿವಮಂದಿರದಲ್ಲಿ, ವಸಂತ ಪಂಚಮಿಯಂದು ಪದಮಾವತಿಯು ಶಿವ ದರ್ಶನಕ್ಕಾಗಿ ಬರುವಳೆಂದೂ ತಿಳಿಸಿದನು. ನಂತರ ರಾಜನನ್ನು ಅಲ್ಲಿಯೇ ಬಿಟ್ಟು ಪದಮಾವತಿಯ ಬಳಿ ಸೇರಲು ಹಾರಿಹೋಯಿತು.

೧೭. ಮಂಟಪ ಗಮನ ಖಂಡ

ವಿಯೋಗಿಯಾಗಿದ್ದ ರಾಜನು ಶಿವ ಮಂದಿರವನ್ನು ಸೇರಿ ಶಿವನನ್ನು ಪೂಜಿಸಲಾರಂಭಿಸಿದ. ಆಗ ರಾಜನಿಗೆ ಮಂದಿರದಲ್ಲಿ ಒಂದು ಗಂಭೀರ ಶಬ್ದ ಕೇಳಿಸಿತು. 'ಮಾನವನು ಪ್ರೇಮ ಮಾರ್ಗಿಯಾಗಿ ವೈಕುಂಠ ಸೇರಬೇಕು' ಎಂದು ತಿಳಿಸಿದ ಆ ಶಬ್ದವನ್ನು ಗೌರವಿಸಿ 'ಪದಮಾವತಿ, ಪದಮಾವತಿ' ಎಂದು ಪದಮಾವತಿಯ ಧ್ಯಾನ ಮಾಡಲಾರಂಭಿಸಿದ.

೧೮. ಪದ್ಮಾವತೀ ವಿಯೋಗ ಖಂಡ

ರಾಜಾ ರತ್ನಸೇನನ ಯೋಗದ ಪ್ರಭಾವದಿಂದ ಪದಮಾವತಿಯ ಹೃದಯವು ವಿಚಲಿತವಾಯಿತು. ಅವಳಿಗೆ ಅಜ್ಞಾತವಾಗಿ ಪ್ರಿಯತಮ

ನಿಂದ ವಿರಹಗೊಂಡಂತೆ ಅನುಭವವಾಗತೊಡಗಿತು. ತಾನು ಯೌವನ ವತಿಯಾದಾಗಿಯೂ ಪ್ರಿಯತಮನ ಸಂಗ ದೊರೆತಿಲ್ಲದ ಕಾರಣ ಅತಿ ದುಃಖಿತಳಾಗಿರುವುದಾಗಿ ತನ್ನ ದಾದಿಯೊಡನೆ ಹೇಳಿಕೊಂಡಳು. ಏನೋ ಒಂದು ತರಹ ಪ್ರಿಯತಮನು ಬಳಿಯಲ್ಲಿಲ್ಲದ ಅಗಲಿಕೆಯ ಅನುಭವ ವಾಗುತ್ತಿರುವುದಾಗಿಯೂ ಹೇಳಿಕೊಂಡಳು. ದಾದಿಯು ಧೈರ್ಯತುಂಬಿ, ಇಂಥ ವಿರಹವು ಪ್ರಿಯತಮನು ಪ್ರಾಪ್ತವಾಗುವವರೆಗೂ ಇರುತ್ತದೆ, ನಂತರ ಆನಂದ ಮೈದುಂಬುತ್ತದೆ, ಅಲ್ಲಿಯವರೆಗೂ ನಾಚಿಕೆ ಎಂಬ ಆಭರಣ ತೊಟ್ಟು, ಮೌನ ಎಂಬ ಧ್ಯಾನದಿಂದ, ಸಹನೆ ಎಂಬ ಸಾಧನೆ ಕೈಗೊಂಡರೆ ಇಷ್ಟಾರ್ಥ ಲಭಿಸುವುದು ಎಂದಳು.

೧೯. ಪದ್ಮಾವತೀ ಸುಆ ಭೇಟಿ ಖಂಡ

ಪದಮಾವತಿಯು ವಿರಹ ದುಃಖದಲ್ಲಿ ಕೊರಗಿ ಸೊರಗಿರುವಾಗ ಗಿಳಿ ಹೀರಾಮನ್ ಅಲ್ಲಿಗೆ ಬರುತ್ತದೆ. ಒಡನೆಯೇ ಅವಳು ಪ್ರಸನ್ನ ಳಾಗಿ, ಭಾವುಕವಾಗಿ ಅದನ್ನು ಪ್ರೀತಿಯಿಂದ ಹಿಡಿದುಕೊಂಡು ಎದೆಗಪ್ಪಿ ಕೊಳ್ಳುತ್ತಾಳೆ, ಅದರ ಕ್ಷೇಮ ಸಮಾಚಾರವನ್ನು ಕೇಳುತ್ತಾಳೆ. ಗಿಳಿಯು ತನ್ನ ಎಲ್ಲ ವೃತ್ತಾಂತವನ್ನು ಹೇಳುತ್ತದೆ ಮತ್ತು ಪದಮಾವತಿಗಾಗಿ ಕಾಯುತ್ತಾ ಯೋಗಿಯಾಗಿ ಧ್ಯಾನ ಮಾಡುತ್ತಿರುವ ರತ್ನಸೇನನ ಬಗೆಗೂ ಹೇಳುತ್ತದೆ. ಮೊದಲಿಗೆ ಅವನು ತನಗೆ ತಕ್ಕವನಲ್ಲವೇನೋ ಎಂಬ ಗರ್ವದ ಮಾತುಗಳನ್ನು ಆಡಿದರೂ, ಗಿಳಿಯಿಂದ ರಾಜನ ರೂಪ ಸಂಪನ್ನತೆಯ ಶೌರ್ಯಾತಿಶಯದ ಗುಣಗಾನ ಕೇಳಿ ಧನ್ಯಳೆಂದುಕೊಂಡಳು. ತಾನು ಖಂಡಿತವಾಗಿಯೂ ವಸಂತ ಪಂಚಮಿಯಂದು ರತ್ನಸೇನನನ್ನು ಸೇರಲು ಹೋಗುವುದಾಗಿ ತಿಳಿಸಿದಳು. ಅಂತೇ ಗಿಳಿಯೂ ಕೂಡ ಎಲ್ಲ ವನ್ನೂ ರತ್ನಸೇನನಿಗೆ ತಿಳಿಸಿತು.

೨೦. ವಸಂತ ಖಂಡ

ರತ್ನಸೇನನು ಕಾಯುತ್ತಿದ್ದ ಆ ವಸಂತ ಪಂಚಮಿ ಬಂದಿತು. ಅಂದು ಪದ್ಮಾವತಿಯು ತನ್ನ ಸಖಿಯರೊಂದಿಗೆ ಶಿವನ ಪೂಜೆಗಾಗಿ ಹೊರಟಳು. ಹೋಗುತ್ತಿರುವಂತೆಯೇ ತನಗಾಗಿ ಕಾದಿದ್ದ ಅವರು ತನಗೆ ಅನುರೂಪವ್ಯಕ್ತ್ಯವನಾಗಿರಲೆಂದು ಮನದಲ್ಲೇ ಪ್ರಾರ್ಥಿಸತೊಡಗಿದಳು, ಆಗ ಸಖಿಯೊಬ್ಬಳು, ಅಲ್ಲೇ ಇದ್ದ ಯೋಗಿಗಳ ಒಂದು ಸಮೂಹದ ಬಗೆಗೆ, ಅವರ ಗುರು ಒಬ್ಬ, ೩೨ ಲಕ್ಷಣಗಳಿಂದ ಕೂಡಿ ರಾಜಕುಮಾರನಂತೆ ಧೀಮಂತನಾಗಿ ಕಂಡ ಬಗೆಗೆ ವರ್ಣಿಸಿದಳು. ಅವರನ್ನರಸಿ ಪದ್ಮಾವತಿಯು ಅಲ್ಲಿಗೆ ಹೋದಾಗ, ಅವಳನ್ನು ನೋಡಿದ ರತ್ನಸೇನನು ಕೂಡಲೇ ಮೂರ್ಛಿತನಾದಾಗ, ಪದ್ಮಾವತಿಯು ಅವನ ಹಣೆಯ ಮೇಲೆ ತನ್ನ ಕೈಯಾರೆ ಚಂದನವನ್ನಿಟ್ಟು, ಅವನ ಎದೆಯ ಮೇಲೆ— 'ಜೋಗಿ, ಇನ್ನೂ ನೀನು ಭಿಕ್ಷೆ ಹೊಂದಲು ಯೋಗ್ಯನಾಗಿಲ್ಲ. ಸರಿಯಾದ ಸಮಯದಲ್ಲಿ ನೀನು ನಿದ್ದೆ ಮಾಡಿಬಿಡುತ್ತೀಯ, ನನ್ನನ್ನು ಒಲಿಸಿಕೊಳ್ಳಲು ಇಚ್ಛೆಯಿದ್ದರೆ ಏಳನೇ ಆಕಾಶವನ್ನೇರಿ ಭೇಟಿಯಾಗಲು ಬರಬೇಕಾಗುವುದು' ಎಂದು ಬರೆದು ಸಖಿಯರೊಂದಿಗೆ ಅರಮನೆಗೆ ಹಿಂತಿರುಗಿದಳು. ಆ ರಾತ್ರಿ ಅವಳಿಗೆ ಸೂರ್ಯ ಚಂದ್ರರಿಬ್ಬರೂ ಕೂಡಿಕೊಂಡಂತೆ ಕನಸಾಯಿತು.

೨೧. ರಾಜಾ ರತ್ನಸೇನ–ಸತೀ ಖಂಡ

ರಾಜನಿಗೆ ಎಚ್ಚರವಾದಾಗ ಪದ್ಮಾವತಿಯು ಇರಲಿಲ್ಲ. ಅದನ್ನು ಕಂಡು ಅವನಿಗೆ ಬಹಳ ದುಃಖವಾಯಿತು. ತನ್ನನ್ನು ಹಳಿದುಕೊಳ್ಳತೊಡಗಿದನು. ಯಾರಿಗಾಗಿ ಅವನು ಜೋಗಿಯ ವೇಷ ತೊಟ್ಟನೋ ಅವಳು ಕಂಡೂ ದೊರೆಯದಂತಾಯಿತು. ಹಾಗಾಗಿ ತಾನು ಸಾಯಲು ತೀರ್ಮಾನಿಸಿ ಚಿತೆಯೊಂದನ್ನು ಅಣಿಮಾಡಿದನು. ಅವನ ಈ ಕೆಲಸ

ವನ್ನೆಲ್ಲ ದೇವತೆಗಳು ನೋಡಿ ಚಿಂತಾಜನಕರಾದರು. ಅವನ ವಿರಹಾಗ್ನಿ ಜ್ವಾಲೆಯು ದಹದಹಿಸುತ್ತಿತ್ತು. ಲೋಕವನ್ನೆಲ್ಲ ವ್ಯಾಪಿಸುವಂತಿದ್ದ ಈ ವಿರಹಾಗ್ನಿ ಜ್ವಾಲೆಯನ್ನು ಕಂಡ ಹನುಮಂತನು ಶಿವ-ಪಾರ್ವತಿಯರಲ್ಲಿ ಹೋಗಿ ವಿನಂತಿಸಿಕೊಂಡನು. 'ರಾಜಾ ರತ್ನಸೇನನು, ಶಿವನೇ ನಿನ್ನ ಮಂಟಪದಲ್ಲೇ ಉರಿದು ಬೂದಿಯಾಗುತ್ತಿದ್ದಾನೆ'.

೨೨. ಪಾರ್ವತೀ ಮಹೇಶ ಖಂಡ

ಅವನ್ನು ಕೇಳಿದೊಡನೆಯೇ ಈಶ್ವರನು ಪಾರ್ವತಿಯೊಂದಿಗೆ ಅಲ್ಲಿಗೆ ಬಂದನು. ರಾಜನು ಸಾಯಲು ಬಯಸುವ ಕಾರಣವನ್ನು ಕೇಳಿದನು. ಕಾರಣ ತಿಳಿದ ಮೇಲೆ ಪಾರ್ವತಿಯು ಪದಮಾವತೀ ವೇಷದಲ್ಲಿ ಬಂದು ನಾನೇ ಪದಮಾವತೀ ಎಂದು ಹೇಳುತ್ತಾ ಅವನನ್ನು ಪರೀಕ್ಷಿಸಿದಳು. ಪರೀಕ್ಷೆಯಲ್ಲಿ ರಾಜಾ ರತ್ನಸೇನನು ಗೆದ್ದನು. ಶಿವನು ರಾಜನಿಗೆ ಸಾಂತ್ವನವನ್ನು ನೀಡಿ ಹೇಳಿದನು—'ಸಿಂಹಳಗಢವು ನಿನ್ನ ಮನಸ್ಸಿನಷ್ಟೇ ಕಠಿಣವು. ಅದರಲ್ಲಿ ಒಂಭತ್ತು ಬಾಗಿಲುಗಳಿವೆ, ಹತ್ತನೆಯದು ಗುಪ್ತ ದ್ವಾರ. ಒಂಭತ್ತು ಬಾಗಿಲುಗಳನ್ನೂ ಐದು ಜನ ಕೊತ್ವಾಲರು ಕಾಯುತ್ತಿರುತ್ತಾರೆ. ಒಂದು ವಿಶಾಲ ಕುಂಡದೊಳಗೆ ಗುಪ್ತವಾಗಿ ದೊಡ್ಡ ಸುರಂಗವೂ ಇದೆ. ಅದೇ ಸುರಂಗದಿಂದ ಕೋಟೆಯ ಮೇಲೆ ಹೋಗುವ ಮಾರ್ಗ ಕೂಡಾ ಇದೆ. ಅತ್ಯಂತ ಬುದ್ಧಿವಂತಿಕೆಯಿಂದ, ಸಾಹಸ ಮನಸ್ಸಿನಿಂದ ಆ ಕೋಟೆಯನ್ನು ಪ್ರವೇಶಿಸು. ಆದಾಗ್ಯೂ ಅದು ನಿನ್ನ ಕೈವಶವಾಗುವ ಸಂಭವ ತೀರ ಕಡಿಮೆ. ಬದುಕಿರುವಂತೇ ನಿನ್ನನ್ನು ನೀನು ಕಳೆದುಕೊಳ್ಳುವ ಸಂಭವವೇ ಹೆಚ್ಚು.

೨೩. ರಾಜಾ ಗಢ-ಛೇಂಕಾ (ಕೋಟೆ ಮುತ್ತಿಗೆ) ಖಂಡ

ರಾಜನಿಗೆ ಶಿವನಿಂದ ಸಿದ್ಧಿಗುಟಿಕೆಯು ಪ್ರಾಪ್ತವಾಯಿತು. ನಂತರ, ಮೊದಲಿಗೆ ಗಣೇಶನನ್ನು ಸ್ತುತಿಸಿ ತನ್ನ ಸೈನ್ಯದೊಂದಿಗೆ ಕೋಟೆಗೆ

ಮುತ್ತಿಗೆ ಹಾಕಿತು. ಮಹಾದ್ವಾರದ ಬಳಿ ಕೋಲಾಹಲ ಉಂಟಾಯಿತು, ರಾಜಾ ಗಂಧರ್ವಸೇನನಿಗೆ ಸಂಗತಿ ತಿಳಿಯಿತು. ರತ್ನಸೇನನಿಗೆ ಅಲ್ಲಿಂದ ಹೊರಟು ಹೋಗಲು ಹೇಳಿಕಳಿಸಿದ. ರತ್ನಸೇನನು ತಾನು ಪದ್ಮಾವತಿಯ ಭಿಕ್ಷೆಗಾಗಿ ಬಂದಿರುವೆನೆಂದು ತಿಳಿಸಿದನು. ಕೋಪಾವಿಷ್ಟನಾದ ಗಂಧರ್ವಸೇನನು ಆ ಜೋಗಿಯನ್ನು ಸೆರೆ ಹಿಡಿಸಿ ಕೊಲ್ಲಿಸಲು ಯೋಚಿಸಿದ. ಮಹೇಶ್ವರನು ಒಬ್ಬ ಭಟನ ವೇಷದಲ್ಲಿ ಬಂದು ಗಂಧರ್ವಸೇನನಿಗೆ ರತ್ನಸೇನನ ಬಗ್ಗೆ ಪರಿಪರಿಯಾಗಿ ವರ್ಣಿಸಿ, ಅವನು ಪದಮಾವತಿಗೆ ತಕ್ಕ ವರನೆಂದೂ ತಿಳಿಸಿದ. ಆದರೂ ಗಂಧರ್ವಸೇನ ಒಪ್ಪಲಿಲ್ಲ. ಜೋಗಿಗಳ ಮೇಲೆ ಯುದ್ಧ ಸಾರಿದ. ಯೋಗಿಗಳೊಂದಿಗೆ ಸಹಾಯಕ್ಕೆ ದೇವತೆಗಳೂ ಸಜ್ಜಾದರು. ಇತ್ತ ರತ್ನಸೇನನು ವಿರಹದ ದುಃಖಾಗ್ನಿಯಿಂದ ಬಾಧಿತನಾಗಿ ಗಿಳಿ ಹೀರಾಮನ್‌ನೊಂದಿಗೆ ಪದಮಾವತಿಗೆ ಸಂದೇಶ ಕಳಿಸಿದ. ಹಿಂತಿರುಗಿ ಗಿಳಿ ಒಂದು ಪತ್ರ ತಂದಿತು, ಅದರಲ್ಲಿ ಪದಮಾವತಿಯು 'ನನ್ನನ್ನು ಪಡೆಯಲು ಜೀವವನ್ನೇ ಪಣವಾಗಿಟ್ಟು ಪ್ರಯತ್ನಶೀಲನಾಗು'–ಎಂದು ಬರೆದಿದ್ದಳು. ರತ್ನಸೇನನಿಗೆ ಆ ಪತ್ರ ನೂರು ಬಲವನ್ನು ತಂದುಕೊಟ್ಟಿತು. ಅವನು ತನ್ನ ಜೊತೆಗಾರರೊಂದಿಗೆ ಕೋಟೆ ಬಾಗಿಲು ತೆಗೆದು ಮೇಲೇರಿ ಹೋದ. ರಾಜಭಟರು ಅವನನ್ನು ಕಳ್ಳನೆಂದು ತಿಳಿದು ಸೆರೆಹಿಡಿದರು.

೨೪. ಗಂಧರ್ವಸೇನ–ಮಂತ್ರಿ ಖಂಡ

ಗಂಧರ್ವಸೇನನು ತನ್ನ ಮಂತ್ರಿಗಳೊಂದಿಗೆ, ಸೆರೆಸಿಕ್ಕ ಈ ಜೋಗಿಗಳಿಗೆ ಏನು ಶಿಕ್ಷೆ ಕೊಡಬೇಕೆಂದು ಸಮಾಲೋಚಿಸಿದನು. ಎಲ್ಲ ಕಳ್ಳರಿಗೂ ಕೊಟ್ಟಂತೇ ಈ ಜೋಗಿಗೂ ಶೂಲಕ್ಕೇರಿಸುವ ಶಿಕ್ಷೆಯೇ ಸರಿ ಎಂದು ತೀರ್ಮಾನಿಸಿದರು. ದೊಡ್ಡ ಸೈನ್ಯ ಕಳಿಸಿ ಎಲ್ಲ ಜೋಗಿಗಳನ್ನು ಬಂಧಿಸಿದರು. ಪ್ರೇಮ ದುಃಖಿತಳಾದ ಪದಮಾವತಿಗೆ ಹೀರಾಮನ್ ಈ ಸುದ್ದಿಯನ್ನು ತಿಳಿಸಿ ರತ್ನಸೇನನು ಶೂಲ ಶಿಕ್ಷೆಯನ್ನು ಕುರಿತು

ಹೇಳಿತು. ಅವಳು ಮತ್ತಷ್ಟು ವ್ಯಾಕುಲಳಾದಳು. ಅವಳನ್ನು ಆ ಗಿಳಿಯು ಸಮಾಧಾನಪಡಿಸಿತು.

೨೫. ರತ್ನಸೇನ–ಶೂಲೀ ಖಂಡ

ಶೂಲಕ್ಕೇರಿಸಲು ಎಲ್ಲ ಸಿದ್ಧವಾಗಿತ್ತು, ರತ್ನಸೇನನು ಏನು ಆಗದವನಂತೆ ನಗುತ್ತಿದ್ದ. ಅವನ ರೂಪ, ತೇಜಸ್ಸು, ಶಾಂತತೆಯನ್ನು ಕಂಡು ಜನರು ಆಶ್ಚರ್ಯಪಟ್ಟರು. ಭಟನ ವೇಷದಲ್ಲಿಯ ಶಿವನು ಅಲ್ಲಿಗೆ ಬಂದು— ರತ್ನಸೇನನ್ನು ಶೂಲಕ್ಕೇರಿಸಿದರೆ ಭಯಂಕರ ಯುದ್ಧ ಎದುರಿಸಬೇಕಾಗುವುದೆಂದು ಹೇಳಿ ಶಂಖನಾದ ಮಾಡಿದ. ದೇವತೆಗಳ ಸೇನೆ ಎಲ್ಲ ಒಂದೆಡೆಗೆ ಸೇರಿದವು. ಗಂಧರ್ವಸೇನನಿಗೆ ಸತ್ಯದ ಅರಿವಾಯಿತು. ಶಿವನನ್ನು ಗುರುತಿಸಿ ಅವನಿಗೆ ನಮಸ್ಕರಿಸಿ ವಿವಾಹಕ್ಕೆ ಅನುಮತಿ ನೀಡಿದ. ಎಲ್ಲ ಜೋಗಿಗಳನ್ನು ಬಂಧನದಿಂದ ಬಿಡಿಸಿದ.

೨೬. ರತ್ನಸೇನ–ಪದಮಾವತೀ ವಿವಾಹ ಖಂಡ

ವಿವಾಹದ ತಯಾರಿ ಭರದಿಂದ ಸಾಗಿತು. ಪದಮಾವತಿಗೆ ಅತೀವ ಆನಂದವಾಯಿತು. ಇಡೀ ಸಿಂಹಳ ಕಂಗೊಳಿಸಲಾರಂಭಿಸಿತು. ಶುಭ ಘಳಿಗೆಯಲ್ಲಿ ರತ್ನಸೇನ–ಪದಮಾವತಿಯರ ವಿವಾಹವಾಯಿತು.

೨೭. ಪದಮಾವತೀ–ರತ್ನಸೇನ ಭೇಟಿ ಖಂಡ

ಸಿಂಹಳದ ಏಳು ಖಂಡಗಳ ಮೇಲಿನ ದೊಡ್ಡ ಮಹಲಿನಲ್ಲಿ ಚಿನ್ನದ ಮಂಚವಿತ್ತು. ಸುಂದರವಾಗಿ ಸಜ್ಜುಗೊಳಿಸಿದ ಮಹಲಿನಲ್ಲಿ ತನ್ನ ಮುತ್ತು ಬರಿಸುವ ಸೌಂದರ್ಯದಿಂದ ಪದಮಾವತಿಯು ರಾಜಾ ರತ್ನಸೇನನನ್ನು ಕೂಡಿದಳು.

೨೮. ರತ್ನಸೇನ- ಸಾಥೀ (ಜೊತೆಗಾರರು) ಖಂಡ

ನಂತರ ರತ್ನಸೇನನನ್ನು ನೋಡಿ ಅವನೊಡನೆ ಬಂದ ಎಲ್ಲರು ಆನಂದ ತುದಿಲರಾದರು. ರತ್ನಸೇನನು ಅವರೆಲ್ಲರಿಗೂ ಸಲ್ಲುವಂತೆ ಹದಿನಾರು ಸಾವಿರ ಪದ್ಮಿನಿಯರನ್ನು ಕೊಡಿಸಿದನು. ರಾಜನೂ ಸೇರಿ ದಂತೆ ಎಲ್ಲರೂ ಸಿಂಹಳದಲ್ಲಿ ಸುಖವನ್ನು ಲೂಟಿಮಾಡತೊಡಗಿದರು.

೨೯. ಷಡ್‌ಋತು ವರ್ಣನೆ ಖಂಡ

ನಂತರ ಪದಮಾವತಿಯು ಎಲ್ಲ ಸಖಿಯರೊಂದಿಗೆ ತಾನೂ ಶೃಂಗ ರಿಸಿಕೊಂಡು ರತ್ನಸೇನನೊಡನೆ ಕಾಮ ಕದನಕ್ಕಾಗಿ ಹೊರಟಳು, ಆರು ಋತುಗಳಲ್ಲಿಯೂ ತನ್ನ ಪತಿಯ ಸಂಗಡ ಸುಖಭೋಗಗಳನ್ನು ಅನುಭವಿ ಸಿದಳು.

೩೦. ನಾಗಮತೀ ವಿಯೋಗ ಖಂಡ

ರತ್ನಸೇನನು ಆರು ಋತುಗಳಲ್ಲಿಯೂ ಸುಖಭೋಗಿಯಾಗಿದ್ದ ಕಾಲದಲ್ಲಿ ಅವನ ಪತ್ನಿ ನಾಗಮತಿಯು ಚಿತ್ತೌಢದಲ್ಲಿ ತನ್ನ ಪತಿಯಿಂದಾದ ವಿಯೋಗದಿಂದ ವಿರಹ ಹೊಂದಿದವಳಾಗಿ ದುಃಖವನ್ನು ಅನುಭವಿ ಸಿದಳು. ಅವಳ ಶರೀರವು ಒಣಗಿದ ಮುಳ್ಳಿನಂತಾಯಿತು. ಸದಾ ತನ್ನ ಪತಿಯನ್ನು ಜಪಿಸುತ್ತಿರುವಳು.

೩೧. ನಾಗಮತೀ ಸಂದೇಶ ಖಂಡ

ನಾಗಮತಿಯು ಅಳುತ್ತಾ ಅಲೆದಾಡುತ್ತಿದ್ದಳು. ಯಾರೂ ಆಕೆಗೆ ಧೈರ್ಯ ಹೇಳುವರಿರಲಿಲ್ಲ. ಅವಳ ವಿರಹ ವಿಲಾಪದಿಂದ ಪಶು ಪಕ್ಷಿಗಳೂ ದುಃಖಪೀಡಿತವಾದವು. ಒಂದು ರಾತ್ರಿಯ ಹೊತ್ತಿನಲ್ಲಿ ಅವಳ ರೋದನವನ್ನು ಕೇಳಿಸಿಕೊಂಡ ಒಂದು ಹಕ್ಕಿಯು ಅವಳ ಮೇಲೆ

ಕರುಣೆ ಉಕ್ಕಿ 'ನಿನ್ನ ವಿರಹದ ಸಂದೇಶವನ್ನು ನಾನು ರತ್ನಸೇನನಿಗೆ ಮುಟ್ಟಿಸುತ್ತೇನೆ' ಎಂದು ಹೇಳುತ್ತಾ ಸಿಂಹಳ ದ್ವೀಪಕ್ಕೆ ಬಂದಿತು. ಆ ವಿರಹಾಗ್ನಿಯ ಸಂದೇಶದ ಪ್ರಭಾವದಿಂದ ಸುತ್ತಮುತ್ತಲಿನ ವಸ್ತುಗಳೆಲ್ಲ ಸುಡತೊಡಗಿದವು. ಅಕಸ್ಮಾತ್ತಾಗಿ ಬೇಟೆಗೆ ಬಂದಿದ್ದ ರತ್ನಸೇನನು, ಆ ಹಕ್ಕಿ ಕುಳಿತಿದ್ದ ಮರದ ಬುಡಕ್ಕೆ ವಿಶ್ರಾಂತಿಗಾಗಿ ಬಂದು, ಆ ಹಕ್ಕಿಯಿಂದ ನಾಗಮತಿಯ ಸಂದೇಶವನ್ನು ಕೇಳಿ ವ್ಯಾಕುಲನಾದನು. ಚಿತ್ತೌಢದ ನೆನಪು ಅವನಿಗೆ ಕಾಡತೊಡಗಿತು.

೩೨. ರತ್ನಸೇನ ವಿದಾಯ ಖಂಡ

ರತ್ನಸೇನನು ಮಂಕಾಗಿರುವುದನ್ನು ಕಂಡ ಗಂಧರ್ವಸೇನನು ವಿಚಾರಿಸಿಕೊಂಡನು. ರತ್ನಸೇನನು ವಿವರವಾಗಿ ಚಿತ್ತೌಢದ ಈಗಿನ ಪರಿಸ್ಥಿತಿಯನ್ನು ತಿಳಿಸಿ ತಾನು ಶೀಘ್ರ ಅಲ್ಲಿಗೆ ಹೋಗಲೇಬೇಕಿರುವುದಾಗಿ ಕೋರಿಕೊಂಡನು. ರಾಣಿ ಪದಮಾವತಿಯೂ ಕೂಡ ತನ್ನ ಸಖಿಯರೊಂದಿಗೆ ಹೊರಟಳು. ರತ್ನಸೇನನಿಗೆ ಎಲ್ಲ ಬಗೆಯ ಧನ, ಧಾನ್ಯ, ದ್ರವ್ಯಗಳನ್ನು ಕೊಡಲಾಯ್ತು. ಬಹಳ ವಿಜೃಂಭಣೆಯಿಂದ ಬೀಳ್ಕೊಡಲಾಯ್ತು. ಆ ಸಂಪತ್ತನ್ನು ಕಂಡ ರತ್ನಸೇನನಿಗೆ ಗರ್ವವುಂಟಾಯಿತು. ಪ್ರಯಾಣದ ಅರ್ಧದಲ್ಲಿ ಸಮುದ್ರ ರಾಜನು ಭಿಕ್ಷುಕನ ರೂಪದಲ್ಲಿ ಬಂದು ರತ್ನಸೇನನ ಬಳಿ ಭಿಕ್ಷೆ ಕೇಳಿದ. ಲೋಭವಶನಾದ ರಾಜನು ಭಿಕ್ಷೆ ಕೊಡಲು ನಿರಾಕರಿಸಿದನು.

೩೩. ದೇಶ ಯಾತ್ರೆ ಖಂಡ

ಸಮುದ್ರ ರಾಜನಿಗೆ ಕೋಪಬಂದಿತು. ಅರ್ಧ ದಾರಿಯಲ್ಲಿಯೇ ರಾಜನ ಹಡಗು ಚಂಡಮಾರುತಕ್ಕೆ ಬಲಿಯಾಗಿ ಹಿಂತಿರುಗಿ ಚಲಿಸತೊಡಗಿತು. ಅಲ್ಲಿಗೆ ವಿಭೀಷಣನ ನಾವಿಕನೊಬ್ಬ ಬಂದ. ಅವನು ರಾಜನಿಗೆ

ಭ್ರಮೆ ಉಂಟುಮಾಡಲು ಯೋಚಿಸಿದ ಮತ್ತು ಹಡಗನ್ನು ಇನ್ನೂ ಭಯಂಕರವಾದ ಸಮುದ್ರಕ್ಕೆ ಕರೆದೊಯ್ದ. ಅಲ್ಲಿ ಆ ಹಡಗು ಮುಳುಗಲಾರಂಭಿಸಿತು. ಅದರಲ್ಲಿದ್ದವರೆಲ್ಲ ದಿಕ್ಕಾಪಾಲಾದರು.

೩೪. ಲಕ್ಷ್ಮೀ ಸಮುದ್ರ ಖಂಡ

ಹಡಗು ಒಡೆದು ರಾಜ ಒಂದುಕಡೆ ರಾಣಿ ಒಂದುಕಡೆ ಚಲಿಸತೊಡಗಿದರು. ಪದಮಾವತಿಯು ತೇಲುತ್ತಾ ಬಂದು ದಡಕ್ಕೆ ಬಂದಳು. ಅಲ್ಲಿ ಸಮುದ್ರದ ಕುಮಾರಿ ಲಕ್ಷ್ಮಿಯು ಆಟವಾಡುತ್ತಿದ್ದಳು. ಪ್ರಜ್ಞೆ ತಪ್ಪಿದ ರಾಣಿಗೆ ಪ್ರಜ್ಞೆತರಿಸಿದಳು, ಉಪಚರಿಸಿದಳು, ಧೈರ್ಯತುಂಬಿದಳು. ಆದರೂ ಪದಮಾವತಿಯು ಸತ್ತುಹೋಗಲು ಹಣವಣಿಸಿದಳು. ಇನ್ನೊಂದು ದಡದಲ್ಲಿ ರಾಜ ಅತ್ಯಂತ ದುಃಖಿತನಾಗಿ ವಿಲಪಿಸತೊಡಗಿದನು. ತಾನು ಚಿತೆ ಏರಲು ಸಿದ್ಧನಾದ. ಅವನ ನಿಜವಾದ ಪ್ರೇಮವನ್ನು ಕಂಡು ಸಮುದ್ರರಾಜನು ಪದಮಾವತಿಯೊಡನೆ ಅವನಿಗೆ ಮಿಲನ ಮಾಡಿಸಿದ. ಲಕ್ಷ್ಮಿಯೂ ಅವನ ಪರೀಕ್ಷೆಮಾಡಿ ಪದಮಾವತಿಯನ್ನು ಅವನಿಗೆ ತೋರಿಸಿದಳು. ಸಮುದ್ರರಾಜನ ಕೃಪೆಯಿಂದ ಎಲ್ಲ ಜೊತೆಗಾರರೊಡನೆ ಕೂಡಿಕೊಂಡು ಇನ್ನಷ್ಟು ರತ್ನ ಮುತ್ತುಗಳನ್ನು ಪಡೆದು ಮತ್ತೆ ಪ್ರಯಾಣ ಬೆಳೆಸಿದರು.

೩೫. ಚಿತ್ತೌಢ ಆಗಮನ ಖಂಡ

ರತ್ನಸೇನನು ಚಿತ್ತೌಢಿಗೆ ಬಂದಾಗ ಎಲ್ಲೆಲ್ಲೂ ಆನಂದ ಸಂತೋಷಗಳು ತುಂಬಿ ತುಳುಕಾಡಿದವು. ಅಂದಿನ ದಿನವೆಲ್ಲ ಗಾನವಾದ್ಯಗಳ ಜೊತೆಯಲ್ಲೇ ಕಳೆಯಿತು. ಆ ರಾತ್ರಿ ನಾಗಮತಿ ರಾಜನನ್ನು ಸೇರಿದಳು.

೩೬. ನಾಗಮತಿ–ಪದ್ಮಾವತಿ ವಿವಾದ ಖಂಡ

ಅಸೂಯೆಯಿಂದ ನಾಗಮತಿ ಪದ್ಮಾವತಿಯರು ಜಗಳವಾಡಿ

ಕೊಂಡರು. ಸವತಿಯರಲ್ಲಿ ದೊಡ್ಡ ವಿವಾದ ಉಂಟಾಯಿತು. ರಾಜನು ಅವರಿಬ್ಬರನ್ನೂ ಸಮಾಧಾನಗೊಳಿಸಿದನು.

೩೭. ರತ್ನಸೇನ–ಸಂತತಿ ಖಂಡ

ನಾಗಮತಿಯು ನಾಗಸೇನನೆಂಬ, ಪದ್ಮಾವತಿಯು ಕಮಲಸೇನನೆಂಬ ಸುಪುತ್ರರನ್ನು ಪಡೆದರು.

೩೮. ರಾಘವ ಚೇತನ ದೇಶ ನಿಕಾಲಾ (ಹೊರಹಬ್ಬು) ಖಂಡ

ರತ್ನಸೇನನ ಆಸ್ಥಾನದಲ್ಲಿ ರಾಘವ ಚೇತನನೆಂಬ ವಿದ್ವಾಂಸನಿದ್ದನು. ಅವನು ಯಕ್ಷಿಣಿಗಾರನೂ ಆಗಿದ್ದನು, ಒಮ್ಮೆ ರಾಜನು ರಾಘವ ಚೇತನನಿಗೆ ದ್ವಾದಶಿ ಎಂದು ಬರುತ್ತದೆ ಎಂದು ಕೇಳಿದನು. ಅವನು ತಪ್ಪಾಗಿ– ಇಂದೇ ದ್ವಾದಶಿ ಎಂದು ಹೇಳಿದ. ಉಳಿದ ವಿದ್ವಾಂಸರು ಇಂದಲ್ಲ ನಾಳೆ ಎಂದರು. ವಿವಾದ ಪರಿಹರಿಸಲು ರಾಘವ ಚೇತನನು ಯಕ್ಷಿಣಿಯ ಬಲದಿಂದ ಅಂದೇ ದ್ವಾದಶಿಯಾಗುವಂತೆ ಮಾಡಿದನು. ಈ ಬಗೆಯ ಛಲವು ನಂತರ ರಾಜನಿಗೆ ತಿಳಿದುಬಂದಾಗ ಅವನ ಮೇಲೆ ಕೋಪಗೊಂಡು ರಾಜ್ಯಭ್ರಷ್ಟನನ್ನಾಗಿ ಮಾಡಿದ. ಇದರಿಂದ ಗಾಭರಿಗೊಂಡ ಪದ್ಮಾವತಿಯು ಅವನನ್ನು ಭೇಟಿಯಾಗಿ ಸಮಾಧಾನ ಮಾಡಲು ಪ್ರಯತ್ನಿಸಿ, ಅವನಿಗೆ ಬಹುಮಾನವಾಗಿ ತನ್ನ ಕೈ ಕಡಗವನ್ನು ಕೊಟ್ಟಳು. ಅದನ್ನು ತೆಗೆದುಕೊಂಡು ಅವನು ನೇರವಾಗಿ ದೆಹಲಿಯ ದೊರೆ ಅಲ್ಲಾಉದ್ದೀನನ ಬಳಿ ಹೋದನು.

೩೯. ರಾಘವ ಚೇತನ ದಿಲ್ಲೀ ಗಮನ ಖಂಡ

ಅಲ್ಲಾಉದ್ದೀನನ ಬಳಿ ಹೋದ ರಾಘವ ಚೇತನನು ಅವನಿಗೆ ತನ್ನ ವಿದ್ಯೆಯಿಂದ ಮರುಳುಗೊಳಿಸಿ, ಅವನನ್ನು ಸ್ತ್ರೀ ಲೋಲನಾಗುವಂತೆ ಮಾಡಿದನು.

೪೦. ಸ್ತ್ರೀ ಭೇದ ವರ್ಣನೆ ಖಂಡ

ಪದ್ಮಿನಿ, ಹಸ್ತಿನಿ, ಶಂಖಿನಿ, ಚಿತ್ತಿನಿ ಮುಂತಾದ ತರತರನಾದ ಸ್ತ್ರೀ ಗುಣಗಳನ್ನು ಮತ್ತು ಸ್ತ್ರೀಯರುಗಳನ್ನೂ ವರ್ಣಿಸಿದನು.

೪೧. ಪದಮಾವತೀ ರೂಪ ಚರ್ಚಾ ಖಂಡ

ಪದ್ಮಿನಿ ಸ್ತ್ರೀಯರನ್ನು ಕುರಿತು ಹೇಳುತ್ತಾ, ಪದಮಾವತಿಯನ್ನು ಶಿಖದಿಂದ ನಖದವರೆಗೆ ವರ್ಣನೆ ಮಾಡಿದನು. ಆ ವರ್ಣನೆಯನ್ನು ಕೇಳಿಯೇ ಅಲ್ಲಾಉದ್ದೀನನು ಮೂರ್ಛೆಹೋದನು. ಅವಳ ಮೇಲೆ ಆಶೆ ಬಂದು, ಅವಳನ್ನು ಪಡೆಯಲು ಯೋಚಿಸಿದನು. ಒಬ್ಬ ದೂತನ ಮೂಲಕ ಪದಮಾವತಿಗೆ ತನ್ನ ಇಂಗಿತವನ್ನು ತಿಳಿಸಿ ಒಂದು ಪತ್ರ ಬರೆಸಿ ಕಳಿಸಿದನು.

೪೨. ಬಾದಷಹ ಆಕ್ರಮಣ ಖಂಡ

ದೂತನು ತಂದ ಕಾಗದವನ್ನು ಓದಿ ರತ್ನಸೇನನು ಕೋಪಾವಿಷ್ಟನಾದನು. ಅದೇ ದೂತನ ಮೂಲಕ ಯುದ್ಧಕ್ಕೆ ಸನ್ನದ್ಧನಾಗುವಂತೆ ಸೂಚಿಸಿ ಕಳಿಸಿದನು. ಅಲ್ಲಾಉದ್ದೀನನೂ ಯುದ್ಧಕ್ಕೆ ಸಿದ್ಧನಾದನು. ಇಬ್ಬರೂ ಭಾರೀ ಸೈನ್ಯವನ್ನು ಅಣಿಗೊಳಿಸಿದರು.

೪೩. ರಾಜಾ–ಬಾದಷಹ ಯುದ್ಧ ಖಂಡ

ಇಬ್ಬರಿಗೂ ಭಯಂಕರ ಯುದ್ಧವಾಯಿತು. ಅಲ್ಲಾಉದ್ದೀನನ ಶಕ್ತಿ ಹೆಚ್ಚೇ ಇತ್ತು. ರತ್ನಸೇನನು ನಿಲ್ಲದಾದನು. ಕೋಟೆಯ ಒಳಗೆ ಓಡಿ ಹೋಗಿ ಅವಿತುಕೊಂಡನು. ಅಲ್ಲಾಉದ್ದೀನನು ಕೋಟೆಯನ್ನು ಮುತ್ತಿದನು. ತೋಪು, ಗುಂಡು, ಬಾಣಗಳ ಮಳೆಗರೆದನು. ಎಂಟು ವರ್ಷಗಳ ಕಾಲ ಈ ಯುದ್ಧ ನಡೆಯಿತು. ಮಧ್ಯದಲ್ಲೇ ಅಲ್ಲಾಉದ್ದೀನನಿಗೆ ದೆಹಲಿಯಿಂದ ಕರೆಬಂದಿತು,

೪೪. ರಾಜಾ–ಬಾದಷಹ ಸಂಧಿ ಖಂಡ

ಬಾದಷಾಹನಿಗೆ ಯುದ್ಧ ನಿಲ್ಲಿಸಬೇಕಾಯಿತು. ಸಂಧಿಗಾಗಿ ದೂತನನ್ನು ಕಳಿಸಿದ. ರಾಜನು ಸಂಧಿಗೆ ಒಪ್ಪಿದ ಮತ್ತು ಅಲ್ಲಾಉದ್ದೀನನನ್ನು ಭೋಜನಕ್ಕೆ ಆಮಂತ್ರಿಸಿದನು.

೪೫. ಬಾದಷಾಹ ಭೋಜನ ಖಂಡ

ಬಾದಷಾಹನಿಗೆ ತರತರದ ಭೋಜನವನ್ನು ರತ್ನಸೇನನು ಏರ್ಪಡಿಸಿದ.

೪೬. ಚಿತ್ತೌಢ್‌ದುರ್ಗ ವರ್ಣನೆಯ ಖಂಡ

ಭೋಜನದ ನಂತರ ಅತ್ಯಂತ ವೈಭವ ಪೂರ್ಣ ಚಿತ್ತೌಢದ ಕೋಟೆಯನ್ನು ಅಲ್ಲಾಉದ್ದೀನನು ವೀಕ್ಷಿಸಿದ. ಅದರ ಭವ್ಯತೆ ಮತ್ತು ಸೌಂದರ್ಯಕ್ಕೆ ಮಾರುಹೋದ. ರಾಜಾ ರತ್ನಸೇನನಿಗೆ ಅವನ ಇಬ್ಬರು ಸೈನಿಕರಾದ ಗೋರಾ ಮತ್ತು ಬಾದಲ್ ಎಂಬುವವರು, ಈ ಸಂಧಿಯನ್ನು ಮಾಡಿಕೊಳ್ಳಬಾರದೆಂದು ಎಚ್ಚರಿಸಿದರೂ ರಾಜಾ ಸಂಧಿಗೆ ಒಪ್ಪಿದ. ಒಮ್ಮೆ ಷಾಹನು ಮತ್ತು ರಾಜಾ ಇಬ್ಬರೂ ಚದುರಂಗದಾಟದಲ್ಲಿರುವಾಗ ಷಾಹನ ಎದುರು ಕಂಡ ಒಂದು ಕಂಬದಲ್ಲಿನ ಕನ್ನಡಿಯಲ್ಲಿ ಪದಮಾವತಿಯು ಕಾಣಿಸಿಕೊಂಡಳು. ಅವಳನ್ನು ಕನ್ನಡಿಯಲ್ಲಿ ಕಂಡೇ ಷಾಹನು ಮೂರ್ಛೆ ಹೋದ.

೪೭. ರತ್ನಸೇನ ಬಂಧನಾ ಖಂಡ

ಮಾರನೆಯ ದಿನ ಬಾದಷಾಹನು ಹಿಂತಿರುಗಿ ದಿಲ್ಲಿಗೆ ಹೊರಡುವ

ಸಮಯ ಬಂದಾಗ ರತ್ನಸೇನನು ಒಬ್ಬನೇ ಬಾದಷಾಹನಿಗೆ ವಿದಾಯ ಹೇಳಲು ಬಂದ. ಆಗ ಬಾದಷಾಹನು ಮೋಸದಿಂದ ರತ್ನಸೇನನನ್ನು ಸೆರೆಹಿಡಿದ.

೪೮. ಪದಮಾವತಿ–ನಾಗಮತಿ ವಿಲಾಪ ಖಂಡ

ರಾಜಾ ಬಂದಿಯಾದ ಸುದ್ದಿ ಕೇಳಿ ಸವತಿಯರಿಬ್ಬರೂ ಬಹುವಾಗಿ ಗೋಳಾಡಿದರು.

೪೯. ದೇವಪಾಲ–ದೂತಿ ಖಂಡ

ಕುಂಭಲನೇರ ಎಂಬಲ್ಲಿ ದೇವಪಾಲನೆಂಬ ರಾಜನಿದ್ದ. ರತ್ನಸೇನನ ದ್ವೇಷಿಯಾಗಿದ್ದ. ರತ್ನಸೇನನು ಬಂದಿಯಾದದ್ದನ್ನು ಕೇಳಿದೊಡನೆಯೇ ಪದ್ಮಾವತಿಯನ್ನು ಎಳೆದುತರಲು ಕುಮುದಿನಿ ಎಂಬ ದೂತಿಯನ್ನು ಕಳುಹಿಸಿದ. ಆ ದೂತಿಯು ಪದ್ಮಾವತಿಗೆ ತಾನು ಸಿಂಹಳ ದ್ವೀಪದವಳೆಂದೂ ಗಂಧರ್ವಸೇನನ ಪುರೋಹಿತನ ಮಗಳೆಂದೂ ತಿಳಿಸಿಕೊಂಡಳು. ಹೇಗೋ ನಿಜ ತಿಳಿದ ಅವಳು ದೂತಿಯನು ಹೊಡೆದೋಡಿಸಿದಳು.

೫೦. ಬಾದಷಾಹ ದೂತಿ ಖಂಡ

ಅಲ್ಲಾಉದ್ದೀನನೂ ಕೂಡಾ ನರ್ತಕಿ ಒಬ್ಬಳನ್ನು ದೂತಿಯನ್ನಾಗಿ ಕಳಿಸಿದ. ಅವಳು ಜೋಗತಿಯ ವೇಷದಲ್ಲಿ ಬಂದಳು. ಜೋಗತಿಯ ಸುಂದರ ರೂಪಕ್ಕೆ ಮಾರುಹೋಗಿ ಆತ್ಮೀಯಳಾಗಿ ಕಂಡಳು. ರತ್ನಸೇನನ ಬಂಧನದ ಸಂಗತಿ ಕೇಳಿ ಅತ್ಯಂತ ದುಃಖಿಸಿದಳು. ವಿಶ್ವಾಸ ತುಂಬುವ ಮಾತುಗಳನ್ನಾಡುತ್ತಾ ಕುತಂತ್ರದಿಂದ ಪದಮಾವತಿಯನ್ನು ಕರೆದೊಯ್ಯಲು ಸಂಚು ಮಾಡಿದಾಗ ಅದು ಪದಮಾವತಿಯ ಸಖಿಯರಿಗೆ ತಿಳಿದು ಅವಳನ್ನು ಓಡಿಸಿದರು.

೫೧. ಗೋರಾ ಬಾದಲ್ ಸಂವಾದ ಖಂಡ

ತುಂಬಾ ದುಃಖಿತಳಾದ ಪದಮಾವತಿಯು ರತ್ನಸೇನನ ಆಪ್ತ ಸೈನಿಕರಾದ ಗೋರಾ ಬಾದಲ್ ಬಳಿಗೆ ಬಂದು, ರಾಜನನ್ನು ಉಪಾಯ ಮಾಡಿ ಬಿಡಿಸಿಕೊಂಡು ಬರಲು ಕೇಳಿಕೊಂಡಳು. ಗೋರಾ ಬಾದಲ್ ಕೂಡಾ ರಾಜನನ್ನು ಕರೆತರುವುದಾಗಿ ಮಾತುಕೊಟ್ಟರು. ಭಾಷೆ ಇತ್ತು ವೀಳ್ಯ ಸ್ವೀಕರಿಸಿದರು.

೫೨. ಗೋರಾ ಬಾದಲ್ ಯುದ್ಧ ಯಾತ್ರಾ ಖಂಡ

ಗೋರಾಬಾದಲ್‌ಗಳು ದಿಲ್ಲಿಯ ಸುಲ್ತಾನನ ಮೇಲೆ ಯುದ್ಧಕ್ಕೆ ಸಿದ್ಧತೆ ನಡೆಸಿದರು. ಬಾದಲ್‌ನ ತಾಯಿ, ಹೆಂಡತಿ ಬೇಡವೆಂದರೂ ಕೇಳದೇ ಹೊರಟರು.

೫೩. ಗೋರಾ ಬಾದಲ್ ಯುದ್ಧ ಖಂಡ

ಅವರಿಬ್ಬರೂ ಹದಿನೇಳುಸಾವಿರ ಪಲ್ಲಕ್ಕಿಯನ್ನು ಅಣಿಗೊಳಿಸಿದರು. ಅವುಗಳಲ್ಲಿ ಸಶಕ್ತ ಸೈನಿಕರನ್ನು ಕೂರಿಸಿದರು. ಪದಮಾವತಿಗಾಗಿ ವಿಶೇಷ ಪಲ್ಲಕ್ಕಿ ಸಿದ್ಧವಾಯಿತು. ಅದರಲ್ಲಿ ಒಬ್ಬ ಕಮ್ಮಾರನನ್ನು ಕೂರಿಸಿದರು. ಗೋರಾ ಬಾದಲ್ ಇಬ್ಬರೂ ಪದಮಾವತಿ ಬರುತ್ತಿದ್ದಾಳೆ ಎಂದು ಹೇಳುತ್ತಾ ನಡೆಯತೊಡಗಿದರು. ದೆಹಲಿ ತಲುಪಿದ ಅವರು ಬಂದೀಖಾನೆಯ ರಕ್ಷಕನಿಗೆ ಹತ್ತು ಲಕ್ಷ ಸ್ವರ್ಣ ಮುದ್ರಿಕೆಗಳನ್ನು ಕೊಟ್ಟು ಅವನ ಕೈಲಿ ಸುಲ್ತಾನನಿಗೆ ಪದಮಾವತಿ ಬಂದಿರುವುದಾಗಿ, ಹಾಗೂ ಆಕೆಯು ಮೊದಲು ಚಿತ್ತೌಢಗಡದ ಕೀ ಒಂದನ್ನು ರತ್ನಸೇನನಿಗೆ ತಲುಪಿಸಿ ನಂತರ ನಿನ್ನ ಅರಮನೆ ಪ್ರವೇಶಿಸುವುದಾಗಿ ಹೇಳಿಕಳಿಸಿದರು. ಸುಲ್ತಾನನೂ ಒಪ್ಪಿದನು. ಆಗ ಆ ಕಮ್ಮಾರನು ಬಂದೀಖಾನೆಯ

ಕಂಬಿಗಳನ್ನು ತುಂಡರಿಸಿದನು. ಬಾದಲ್ ರಾಜನನ್ನು ಕರೆದುಕೊಂಡು ಹೊರಟನು. ಗೋರಾನು ಹಿಂದೆ ಬರುತ್ತಿದ್ದ ಸೇನೆಯೊಡನೆ ಹೋರಾಡಿ ವೀರ ಸ್ವರ್ಗವನ್ನು ಪಡೆದನು.

೫೪. ಬಂಧ ಮುಕ್ತ–ಪದಮಾವತಿ ಮಿಲನ ಖಂಡ

ರತ್ನಸೇನನನ್ನು ಬಿಡುಗಡೆಗೊಳಿಸಿದ್ದರಿಂದ ಪದಮಾವತಿಗೆ ಅತೀವ ಸಂತೋಷವಾಯಿತು. ಆಕೆಯು ಬಾದಲ್‌ನ ಶಕ್ತಿ ಸಾಮರ್ಥ್ಯಗಳನ್ನು ಕೊಂಡಾಡಿದಳು. ಆತನ ಯುದ್ಧದ ಕುದುರೆಗೆ ಸ್ವತಃ ತನ್ನ ಕೈಗಳಿಂದ ಆರೈಕೆ ಮಾಡಿದಳು. ನಂತರ ಕುಂಭಲನೇರದ ರಾಜ ದೇವಪಾಲ ದೂತಿಯನ್ನು ಕಳಿಸಿದ ಕಥೆಯನ್ನು ರತ್ನಸೇನನಿಗೆ ವಿವರವಾಗಿ ಹೇಳಿದಳು.

೫೫. ರತ್ನಸೇನ–ದೇವಪಾಲ ಯುದ್ಧ ಖಂಡ

ದೇವಪಾಲನ ವಿಷಯ ಕೇಳಿ ರತ್ನಸೇನನಿಗೆ ಕ್ರೋಧ ಉಕ್ಕಿ ಬಂತು. ಅವನ ಮೇಲೆ ದಂಡೆತ್ತಿಹೋದನು. ಅವರಲ್ಲಿ ಭಯಂಕರ ಯುದ್ಧವಾಯಿತು. ದೇವಪಾಲನ ಭರ್ಜಿಯ ಇರಿತಕ್ಕೆ ಒಳಗಾಗಿ ಗಾಯಗೊಂಡನು ಮತ್ತು ತಾನೂ ತನ್ನ ಆಯುಧದಿಂದ ದೇವಪಾಲನನ್ನು ಇರಿದು ಕೊಂದನು. ರತ್ನಸೇನನು ಹಿಂತಿರುಗಿ ಚಿತ್ತೂರಿನ ಕಡೆಗೆ ಬರುತ್ತಿರುವಾಗ ದಾರಿಯಲ್ಲಿ ಮೂರ್ಛೆ ಹೋದನು.

೫೬. ರತ್ನಸೇನನ ವೈಕುಂಠವಾಸ ಖಂಡ

ಅತಿಯಾಗಿ ಗಾಯಗೊಂಡಿದ್ದ ರತ್ನಸೇನನು ಅರ್ಧದಾರಿಯಲ್ಲೇ ವೈಕುಂಠವಾಸಿಯಾದನು. ತಾನು ಸಾಯುವ ಮುನ್ನ ತನ್ನ ಕೋಟೆಯನ್ನು ಬಾದಲ್‌ಗೆ ಒಪ್ಪಿಸಿದನು.

೫೭. ಪದಮಾವತೀ–ನಾಗಮತೀ ಸತೀ ಖಂಡ

ಸತಿಯರಿಬ್ಬರೂ ಪತಿಯ ಚಿತೆಯನ್ನೇರಿ ಸಹಗಮನ ಮಾಡಿದರು. ಅದೇ ವೇಳೆಯಲ್ಲಿ ಸುಲ್ತಾನನು ಕೋಟೆಯನ್ನು ಮುತ್ತಿದನು. ಚಿತ್ತೌಡನ ಸೈನಿಕರು ಯುದ್ಧ ಮಾಡಿ ಸತ್ತರೆ. ಅಲ್ಲಿನ ಸ್ತ್ರೀಯರು 'ಜೌಹಾರ' ವನ್ನು ಮಾಡಿದರು.

ಉಪಸಂಹಾರ

ಈ ಕಥೆಯ ಅರ್ಥವನ್ನು ಕವಿಯು ಪಂಡಿತರಿಗೆ ಕೇಳಿದಾಗ ಅವರುಗಳು ಇದರಲ್ಲಿ ವಿಶೇಷ ಅರ್ಥವನ್ನೇನೂ ಕಾಣಲಿಲ್ಲ. ಆಗ ಕವಿಯೇ ಕಥೆಯ ರಹಸ್ಯ ಅರ್ಥವನ್ನು ಹೇಳುತ್ತಾರೆ. ಅದೇನೆಂದರೆ—ಇಡೀ ಕಥೆಯೇ ಒಂದು ಅನ್ಯೋಕ್ತಿ ಹೇಳಿದ ಹದಿನಾಲ್ಕು ಭುವನಗಳೂ ಮನುಷ್ಯನಲ್ಲೇ ಇದೆ.

ಶರೀರ — ಚಿತ್ತೌಢಗಡ

ಮನಸ್ಸು — ರಾಜ

ಹೃದಯ — ಸಿಂಹಳ ದ್ವೀಪ

ಬುದ್ಧಿ — ಪದ್ಮಿನಿ

ಗುರು — ಗಿಳಿ

ಪ್ರಾಪಂಚಿಕ ವ್ಯವಹಾರ — ನಾಗಮತಿ

ಸೈತಾನ — ರಾಘವ ಚೇತನ

ಮಾಯೆ — ಅಲ್ಲಾಉದ್ದೀನ

ರತ್ನಸೇನ ಪದ್ಮಾವತಿಯರುಗಳು ಯಶಸ್ಸಿನ ಸಂಕೇತ ಮಾತ್ರವಷ್ಟೇ. ಹೀಗೇ ಹೇಳುತ್ತಾ ಜಾಯಸಿಯವರು ತಮ್ಮ ವೃದ್ಧಾಪ್ಯವನ್ನು ಕುರಿತು ಹೇಳುತ್ತಾ ಮಾರ್ಮಿಕವಾಗಿ ಚೈತನ್ಯ ಮತ್ತು ಯಶಸ್ಸಿನ ಕಷ್ಟ ಸಾಧ್ಯತೆಯನ್ನು ಸಾರುತ್ತಾರೆ.

"ಕಾಹೇ ರೆ ಬನ್ ಖೋಜನ್ ಜಾಈ ।
ಸರ್ವನಿವಾಸಿ ಸದಾ ಅಲೇಪಾ ತೋಹೀ ಸಂಗ್ ಸಮಾಈ ।"
—ನಾನಕ್.

(ಕಾಡಿನಲ್ಲಿ ಯಾರನ್ನು ಹುಡುಕುತ್ತಿರುವೆ. ಎಲ್ಲರೂ ನಿನ್ನೊಡನೇ ವಾಸಿಸುತ್ತಾ ಇರುವುದು ನಿನಗೆ ತಿಳಿಯದೇ— ನಾನಕ್).

ಪದಮಾವತ್ ಕಥೆಯ ಆಧಾರ

ಪದಮಾವತ್ ಕಥೆಯ ಆಧಾರ ಐತಿಹಾಸಿಕವಾದದ್ದು. ಭಾರತೀಯ ಇತಿಹಾಸದಲ್ಲಿ ದಿಲ್ಲಿಯ ಅಲ್ಲಾಉದ್ದೀನ್ ಮತ್ತು ಚಿತ್ತೂರಿನ ಭೀಮಸಿಂಹನ ಕಥೆ ಬಹಳ ಪ್ರಸಿದ್ಧಿಹೊಂದಿದೆ. ಭೀಮಸಿಂಹನ ಹೆಂಡತಿ ಪದ್ಮಿನಿ ಅಪೂರ್ವ ಸುಂದರಿಯಾಗಿದ್ದಳು. ಅವಳ ಸೌಂದರ್ಯದ ವರ್ಣನೆ ಕೇಳಿ ಅಲ್ಲಾಉದ್ದೀನನು ಚಿತ್ತೂರಿನ ಮೇಲೆ ಆಕ್ರಮಣ ಮಾಡಿದನು. ಯುದ್ಧದಲ್ಲಿ ಭೀಮಸಿಂಹನು ಸೋತನು. ಸಂಧಿ ಮಾಡಿಕೊಳ್ಳಲು ಸುಲ್ತಾನನನ್ನು ಕೇಳಿದಾಗ— ಪದ್ಮಿನಿಯ ಚಿತ್ರ ತೋರಿಸಿದರೆ ಮಾತ್ರ ಸಂಧಿಗೆ ಒಪ್ಪಿ ದಿಲ್ಲಿಗೆ ಹಿಂದಿರುಗುತ್ತೇನೆಂದು ಸುಲ್ತಾನನು ತಿಳಿಸಿದನು. ಅದಕ್ಕೆ ಒಪ್ಪಿ ಪದ್ಮಿನಿಯನ್ನು ಕನ್ನಡಿಯ ಪ್ರತಿಫಲನದಲ್ಲಿ ಸುಲ್ತಾನನಿಗೆ ತೋರಿಸಿದನು. ಕನ್ನಡಿಯಲ್ಲಿ ಪದ್ಮಿನಿಯನ್ನು ಕಂಡ ಸುಲ್ತಾನನು ಮೋಹಗೊಂಡು, ಮೋಸದಿಂದ ಭೀಮಸಿಂಹನನ್ನು ಬಂದಿಯಾಗಿಸಿದನು ಮತ್ತು ತನಗೆ ಪದ್ಮಿನಿ ದೊರೆಯುವವರೆಗೆ ರಾಜನನ್ನು ಮುಕ್ತಗೊಳಿಸುವುದಿಲ್ಲವೆಂದು ಸಾರಿದನು. ಇದನ್ನು ತಿಳಿದ ಪದ್ಮಿನಿಯು ಒಂದು ಉಪಾಯ ಹೂಡಿದಳು. ಅವಳು ಗೋರಾ–ಬಾದಲ್ ಎಂಬ ಇಬ್ಬರು ಸೈನಿಕರ ಸಹಾಯ ಯಾಚಿಸಿದಳು. ಅವರು ಸುಸಜ್ಜಿತರಾಗಿ ಎರಡು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಬಾದಷಾಹನ ಶಿಬಿರಕ್ಕೆ ಹೊರಟರು. 'ಪದ್ಮಿನಿಯು ಸುಲ್ತಾನನೊಡನೆ ಇರಲು ಒಪ್ಪಿ ಬರುತ್ತಿದ್ದಾಳೆ' ಎಂದು ಸುದ್ದಿ ಕಳುಹಿಸಿದರು. ಶಿಬಿರ

ವನ್ನು ತಲುಪಿದ ಅವರು, ಪದ್ಮಿನಿಯು ಮೊದಲು ತನ್ನ ಪತಿಯನ್ನು ಕಾಣಬಯಸುವಳೆಂದು ತಿಳಿಸಿದರು. ಅವರ ಆಸೆಯನ್ನು ನೆರವೇರಿಸ ಲಾಯಿತು. ಆ ವೇಷ ಬದಲಿಸಿದ ಗೋರಾ–ಬಾದಲ್ ಇಬ್ಬರೂ ಭೀಮಸಿಂಹನ ಬಳಿ ಹೋಗಿ ಅವನನ್ನು ಬಂಧಮುಕ್ತನನ್ನಾಗಿಸಿ ಅವ ನೊಡನೆ ಚಿತ್ತೂರಿಗೆ ಓಡಿಹೋದರು. ಶಂಕೆಗೊಂಡ ಸುಲ್ತಾನನು ಹಿಂಬಾಲಿಸಿದನು. ಯುದ್ಧದಲ್ಲಿ ಗೋರಾ–ಬಾದಲ್‌ಗಳು ಕೊಲ್ಲಲ್ಪ ಟ್ಟರು. ಭೀಮಸಿಂಹ ಮಾತ್ರ ಚಿತ್ತೂರನ್ನು ತಲಪಿದನು. ಸುಲ್ತಾ ನನು ಅಪಮಾನಿತನಾಗಿ ದಿಲ್ಲಿ ಸೇರಿದನು.

'ಆಇನೇ ಅಕ್ಬರಿ'ನಲ್ಲಿ ಈ ಕಥೆಯು ಭೀಮಸಿಂಹನ ಹೆಸರಿಗೆ ಬದಲು ರತನ್‌ಸಿಂಹ ಎಂದಿದೆ ಮತ್ತು ರತನ್‌ಸಿಂಹನನ್ನು ಅಲ್ಲಾಉದ್ದೀನನು ಕೊಂದನೆಂದು ಬರೆದಿದೆ. ಅವಧ್‌ನಲ್ಲಿ ಈ ಕಥೆಯು "ಹೀರಾಮಾನ್ ಸೂಆ ಮತ್ತು ಪದ್ಮಿನಿರಾಣಿಯ ಕಥೆ" ಎಂದು ಪ್ರಚಲಿತವಾಗಿದೆ. ಜಾಯಸಿಯವರು ಒಬ್ಬ ಸೂಫೀ ಸಂತರಾಗಿದ್ದರಿಂದ ತಮ್ಮ ಕಾವ್ಯ ಪದಮಾವತ್‌ನಲ್ಲಿ ತಮ್ಮ ಮತಾನುಸಾರ ಕಾವ್ಯದ ಕಥೆಯ ನಡೆಯನ್ನು ರಚಿಸಿದ್ದಾರೆ. ಇಲ್ಲಿನ ಲೌಕಿಕ ಪ್ರಣಯವನ್ನು ಜಾಯಸಿ ಅಲೌಕಿಕ ಪ್ರಣಯವನ್ನಾಗಿ ಚಿತ್ರಿಸಿದ್ದಾರೆ.

ಅಧ್ಯಾಯ ೫

ಇತರೆ ಕಾವ್ಯಗಳು

ಮಲ್ಲಿಕ್ ಮುಹಮ್ಮದ್ ಜಾಯಸಿಯವರು ತಮ್ಮ ಪದಮಾವತ್ ಹೊರತಾಗಿ ಇನ್ನೂ ಅಖರಾವಟ್— ಆಖಿರೀ ಕಲಾಮ್, ಮಹರೀ ಬಾಈಸೀ ಎಂಬ ಗ್ರಂಥಗಳನ್ನೂ ಬರೆದಿದ್ದಾರೆ, ಆದರೆ ಹಿಂದೀ ಸಾಹಿತ್ಯದ ಶಿರೋಮಣಿ ಎನಿಸಿರುವ ಮಹಾಕಾವ್ಯ ಪದಮಾವತ್ ಬಿಟ್ಟರೆ, ಬೇರಾವ ಅವರ ಬರವಣಿಗೆಯೂ ಸಾಹಿತ್ಯಿಕ ಪ್ರಾಧಾನ್ಯತೆಯನ್ನು ಪಡೆಯಲಿಲ್ಲ. ಜಾಯಸಿಯವರು ಪದಮಾವತ್ ಒಂದರಲ್ಲೇ ತಮ್ಮೆಲ್ಲ ಜೀವನದ ಅನುಭವ ಜ್ಞಾನವನ್ನು ಆಧ್ಯಾತ್ಮಿಕ ವ್ಯಂಗ್ಯದೋಪಾದಿಯಲ್ಲಿ ಧಾರೆ ಎರೆದಿದ್ದಾರೆ. ಉಳಿದ ಬರವಣಿಗೆಗಳು ಸೂಫೀ ಮತ ಪ್ರಚಾರದ ತಿಳುವಳಿಕೆಯ ಒರತೆಗಳಾದವು. ಅವರ ಆಖಿರೀ ಕಲಾಮ್ ಎಂಬ ಕಾವ್ಯದಲ್ಲಿ ಮುಹಮ್ಮದ್ ಪೈಗಂಬರ್‌ರ ಮಹತ್ವದ ವರ್ಣನೆ ಇದೆ. ಇದು ಇಸ್ಲಾಂ ಮತದ ಆಳ ಅರಿವುಗಳನ್ನು ತಿಳಿಯಲು ಉಪಯುಕ್ತವಾಗಿದೆ. ಮುಹಮ್ಮದ್ ಸಾಹೇಬರ ವ್ಯಕ್ತಿತ್ವ, ಧರ್ಮ, ಸಾಮಾಜಿಕ ಸ್ಥಾನ ಮತ್ತು ಅವರ ಪವಾಡಗಳನ್ನು ಕುರಿತ ಇದು ಇಸ್ಲಾಂ ಮತ ಅಭ್ಯಾಸಿಗಳಿಗೆ ಉತ್ತಮ ಹೊತ್ತಗೆಯಾಗಿದೆ ಮತ್ತು 'ಅಖರಾವಟ್' ಎಂಬ ಗ್ರಂಥದಲ್ಲಿ ಈಶ್ವರ, ಜೀವ, ಬ್ರಹ್ಮ, ಸೃಷ್ಟಿ-ನಿರ್ಮಾಣ, ಗುರು, ಧರ್ಮಾಚಾರ ಮುಂತಾದವುಗಳ ಸೈದ್ಧಾಂತಿಕ

ವಿವೇಚನೆ ಇದೆ. ಮುಸಲ್ಮಾನರಾದ ಜಾಯಸಿಯವರು 'ಅಖರಾವಟ್' ಗ್ರಂಥ ರಚನೆ ಮಾಡಿರುವುದು, ಅವರ ಹಿಂದೂ ಧರ್ಮ, ಸಂಪ್ರದಾಯ ಮತ್ತು ಪುರಾಣ— ಸಾಹಿತ್ಯಗಳ ತಿಳುವಳಿಕೆಯ ಆಳವನ್ನು ಗೊತ್ತು ಮಾಡಿಕೊಡುತ್ತದೆ. ಈ ಗ್ರಂಥ ಹಿಂದೂ ಮುಸಲ್ಮಾನ ಐಕಮತ್ಯ ವನ್ನು ಸೈದ್ಧಾಂತಿಕ ಮೌಲ್ಯಗಳ ಆಧಾರದ ಮೇಲೆ ಸ್ಥಾಪಿಸಲು ಪ್ರಯತ್ನ ಮಾಡುತ್ತದೆ. ಈ ಗ್ರಂಥಗಳು ಕಾವ್ಯವಾಗಿ ಏನನ್ನೂ ಸಾಧಿಸಲಾರದಾದರೂ, ಇದನ್ನು ಓದುವ ಪರಿಣತಮತಿಗಳಿಗೆ ಧರ್ಮ ಚಕ್ಷು ಪ್ರಖರವಾಗುವಂತೆ ಮಾಡುತ್ತದೆ.

ಅಧ್ಯಾಯ ೬

ಜಾಯಸಿಯ ಪ್ರೇಮ ವ್ಯಂಜನ

ಭಾರತೀಯ ಸಾಹಿತ್ಯ ಶಾಸ್ತ್ರದಲ್ಲಿ ಮಹಾಕಾವ್ಯದ ಲಕ್ಷಣಗಳನ್ನು ನಾವು ಕಾಣುವಂತೆ ಶೃಂಗಾರ ವೀರ ಶಾಂತ ಇವುಗಳಲ್ಲಿ ಒಂದು ರಸವು ಪ್ರಮುಖವಾಗಿ ಉಳಿದೆಲ್ಲವೂ ಅಂಗರಸಗಳಾಗಿರುತ್ತವೆ. ಜಾಯಸಿ ಯವರ 'ಪದಮಾವತ್' ಅಂತೂ ಸ್ವಾಭಾವಿಕವಾಗಿ ಶೃಂಗಾರ ಕಾವ್ಯ. ಸೂಫೀಗಳ ಯಾವುದೇ ಕಾವ್ಯವೂ ಇದಕ್ಕಿಂತ ಭಿನ್ನ ಇರಲು ಸಾಧ್ಯವಿಲ್ಲ. ಶೃಂಗಾರದ ಎರಡು ಬಗೆಗಳಾದ ಸಂಭೋಗ ಮತ್ತು ವಿಪ್ರಲಂಭ ಅಂದರೆ ಸಂಯೋಗ ಮತ್ತು ವಿಯೋಗಗಳು ಸಮನಾದ ಪ್ರಾಶಸ್ತ್ಯ ಪಡೆದುಕೊಂಡಿದೆ ಜಾಯಸಿಯವರ ಕಾವ್ಯದಲ್ಲಿ. ವಿಶೇಷವೆಂದರೆ ಸಂಯೋಗಕ್ಕೆ ಮುಂಚಿನ, ಅಂದರೆ ಸಂಯೋಗ ಬಯಸುವ ಕಾಲದ— ವಿಪ್ರಲಂಭವನ್ನು ಜಾಯಸಿಯವರು ಪದ್ಮಾವತಿಯ ಪಾತ್ರದಲ್ಲಿ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಇಲ್ಲೇ ನಾವು ಕಾವ್ಯದ ಆಧ್ಯಾತ್ಮಿಕ ತತ್ತ್ವವನ್ನು ಮನಗಾಣಬಹುದು. ಹೇಗೆಂದರೆ ಯಾವುದೇ ಭಾರತೀಯ ಶೃಂಗಾರ ಕಥನಗಳಲ್ಲಿ ಸಂಯೋಗ ಬಯಸುವ ಭಾವನೆಗಳ ಕಾಮನೆಗಳಾಗಿ ಚಿತ್ರಿಸಲ್ಪಟ್ಟಿವೆ. ಇಂಥ ಸೂಕ್ಷ್ಮ ವಿಷಯವನ್ನು ಸಡಿಲ ಕಾಮಕ್ಕೆ ಈಡಾಗದಂತೆ ಜಾಯಸಿಯವರು ಪಾತ್ರವನ್ನು ಕಾಪಾಡಿ ಕೊಂಡಿದ್ದಾರೆ. ಇನ್ನುಳಿದಂತೆ ವೀರ – ಕರುಣ – ವಾತ್ಸಲ್ಯ – ನಿರ್ವೇದ ಅಥವಾ ಶಾಂತ ರಸಗಳನ್ನು ಯಥೋಚಿತವಾಗಿ ಬಳಸಿದ್ದಾರೆ.

ಭಾವುಕ ಸೂಫೀ ಸಂತರು ತಮ್ಮ ಕಾವ್ಯಗಳಲ್ಲಿ ಧರ್ಮ ಸಂಬಂಧಿ ಯಾದ ಅಲೌಕಿಕ ರತಿ ಭಾವನೆಯನ್ನು ಲೌಕಿಕ ರತಿಯೊಂದಿಗೆ ಮೇಳಯಿ ಸಿದ್ದಾರೆ. ಇದರಿಂದಾಗಿ ಶುಷ್ಕ ಆಧ್ಯಾತ್ಮಿಕ ಜಾಗದಲ್ಲಿ ಚೈತನ್ಯಯುಕ್ತ ಪ್ರೇಮತತ್ತ್ವಕ್ಕೆ ಮಹತ್ವ ನೀಡಿದ್ದಾರೆ. ಜಾಯಸಿಯವರ ಕಾವ್ಯದಲ್ಲಿ ನಾಯಕ ನಾಯಕಿಯರ ಪ್ರೇಮವು ಬರೇ ಲೌಕಿಕ ಪ್ರೇಮವಲ್ಲ ಬದಲಾಗಿ

ಅದು ಪ್ರೇಮತತ್ವದ ಸಾಧಕಭಕ್ತ ಮತ್ತು ಪರಮಾತ್ಮನ ಮಿಲನದಲ್ಲಿ ವಿಕಸಿತವಾಗುವ ಅಲೌಕಿಕ ಪ್ರೇಮವಾಗಿದೆ. ಲೌಕಿಕ ಪಕ್ಷದ ಕಥೆಯು ಅಲೌಕಿಕ ಪಕ್ಷದ ಸಂಕೇತವಾಗುತ್ತದೆ. ಇಲ್ಲಿನ ಆಧ್ಯಾತ್ಮಿಕ ಪ್ರೇಮದ ಈ ವ್ಯಂಜನವು ನಮಗೆ ಮೂರು ರೂಪಗಳಲ್ಲಿ ದೊರೆಯುತ್ತದೆ.

೧. ರೂಪಕದ ಮೂಲಕ

೨. ಕಥಾ ಪ್ರಸಂಗಗಳಲ್ಲಿ ಅಲೌಕಿಕತೆಯ ಸಂಕೇತದ ಮೂಲಕ

೩. ಸೂಫೀ ಮತಾನುಸಾರ ಪ್ರೇಮ ವ್ಯಂಜನದ ಮೂಲಕ

ಜಾಯಸಿಯವರ ಕಾವ್ಯದಲ್ಲಿನ ಶೃಂಗಾರದಲ್ಲಿ ಮಾನಸಿಕ ಪಕ್ಷದ ಪ್ರಧಾನತೆ ಕಾಣುತ್ತದೆ. ಸಂಯೋಗ ಮತ್ತು ವಿಯೋಗ ಎರಡರಲ್ಲೂ ಭಾವನಾತ್ಮಕತೆಯೇ ಪ್ರಮುಖವಾಗಿದೆ. ಶಾರೀರಿಕ ಕಾಮಭಾವನೆಯ ಚಿತ್ರಣ ಕಡಿಮೆ ಇದೆ. ಸಂಯೋಗದ ಕಥನದಲ್ಲಿ ಮನಸ್ಸಿನ ಉಲ್ಲಾಸ ಮತ್ತು ವಿಯೋಗದ ಕಥನದಲ್ಲಿ ಮಾನಸಿಕ ವೇದನೆಯ ಕಥನ ಕಂಡು ಬರುತ್ತದೆ. ಭಾರತೀಯ ಪ್ರೇಮ ಪದ್ಧತಿಯಲ್ಲಿ ನಾಯಿಕೆಯ ಪ್ರೇಮ ವೇಗ ಅಧಿಕವಾಗಿರುತ್ತದೆ. ಆದರೆ ಫಾರಸೀ ಪ್ರೇಮ ಪದ್ಧತಿಯಲ್ಲಿ ನಾಯಕನ ಪ್ರೇಮವೇಗ ಅಧಿಕವಾಗಿರುತ್ತದೆ. ಜಾಯಸಿಯವರ ಕಾವ್ಯ ದಲ್ಲಿ ಇವೆರಡರ ಸಮ್ಮಿಳನವಿದೆ. ತಮ್ಮ ಕಾವ್ಯದಲ್ಲಿನ ಇಂಥ ಪ್ರೇಮ ವ್ಯಂಗ್ಯ ಕಥನದ ಮೂಲಕವೇ ಜಾಯಸಿಯವರು ಅಜ್ಞಾತ ಶಕ್ತಿ ಎನಿಸಿದ ಪರಮಾತ್ಮನ ಬಗೆಗೆ ಜಿಜ್ಞಾಸ ಭಾವನೆಯನ್ನು ಸಮರ್ಥವಾಗಿ ಪ್ರತಿ ಪಾದಿಸಿಕೊಂಡಿದ್ದಾರೆ, ಇದಕ್ಕೆ ರಹಸ್ಯವಾದವೆನ್ನುತ್ತಾರೆ. ಪ್ರಿಂಗಲ್ ಪೈಟಿಸನ್ ಎಂಬುವವನು ಈ ರಹಸ್ಯ ವಾದವನ್ನು— "ಪರಮೋಚ್ಚ ಶಕ್ತಿಯೊಡನೆಯ ಪ್ರತ್ಯಕ್ಷ ಮಿಲನದ ಪರಮ ಪವಿತ್ರ ಆನಂದವನ್ನು ಪಡೆದುಕೊಳ್ಳುವ ಮಾನವೀಯ ಪ್ರಯತ್ನ" ಎಂದಿದ್ದಾನೆ. ಜಾಯಸಿ ಯವರ ಕಾವ್ಯದಲ್ಲಿನ ಈ ರಹಸ್ಯವಾದವು ನಾಲ್ಕು ರೂಪದಲ್ಲಿ ಗೋಚರಿಸುತ್ತದೆ.

೧. ಅದ್ವೈತ ತತ್ವದ ಆಧಾರಿತ

೨. ಪ್ರಕೃತಿಯ ಮಾಧ್ಯಮದ ಅಭಿವ್ಯಕ್ತಿ
೩. ಭಾರತೀಯ ಯೋಗ ಮಾರ್ಗದ ಸಾಧನೆಯ ಪದ್ಧತಿಯ ಮಾಧ್ಯಮದ ಮೂಲಕ
೪. ಸೂಫೀ ಪ್ರೇಮ ಭಾವನೆಯ ಮೂಲಕ

ಭಾರತೀಯ ಅದ್ವೈತವಾದವು ಮೂಲತಃ ದಾರ್ಶನಿಕ ಸಿದ್ಧಾಂತ. ಅದು ೧. ಆತ್ಮ ಮತ್ತು ಪರಮಾತ್ಮದ ಏಕತೆ ಮತ್ತು ೨. ಬ್ರಹ್ಮ ಮತ್ತು ಸೃಷ್ಟಿಯ ಏಕತೆ ಎಂಬ ಎರಡು ಪ್ರಮುಖ ತತ್ವವನ್ನೊಳಗೊಂಡಿದೆ. ಈ ಎರಡೂ ತತ್ವದ ವ್ಯಾವಹಾರಿಕ ಮತ್ತು ಭಾವನಾತ್ಮಕ ರೂಪವು ಪ್ರಕೃತಿಯ ಎಲ್ಲ ಜೀವಿಗಳಲ್ಲಿಯೂ ಕಾಣುವ ಪರಮ ಶಕ್ತಿಯು ಪರಮಾತ್ಮನ ಅಂಶವೇ ಆಗಿದೆ. ಈ ಪ್ರಮುಖ ಸಿದ್ಧಾಂತದ ತಿಳುವಳಿಕೆಯನ್ನು ಜಾಯಸಿಯವರು ತಮ್ಮ ಕಾವ್ಯದಲ್ಲಿ ಪ್ರಯತ್ನ ಮಾಡಿದ್ದಾರೆ. ಪ್ರೇಮ ವ್ಯಂಗ್ಯದ ಮೂಲಕ ಆಧ್ಯಾತ್ಮ ತತ್ವವನ್ನು ವಿವರಿಸುವಲ್ಲಿ ಪ್ರಭಾವಶಾಲಿಯಾಗಿ ಚಿತ್ರಿಸಿದ್ದಾರೆ. ಪ್ರಕೃತಿ ಚಿತ್ರಣದಲ್ಲಿಯೂ ಪರಮಾತ್ಮದ ಏಕೀಭವನವನ್ನು, ಯೋಗ ಸಾಧನೆಯ ಮಾರ್ಗದ ಫಲದಲ್ಲಿ ಕಂಡುಬರುವ ಪರಮಾತ್ಮ ಸಾಂಗತ್ಯವನ್ನು, ಮಸನವೀ ಶೈಲಿಯಲ್ಲಿನ ಸೂಫೀ ಪ್ರೇಮ ಚಿತ್ರಣವನ್ನೂ ಜಾಯಸಿಯವರ ಕಾವ್ಯದಲ್ಲಿ ಕಾಣುತ್ತೇವೆ.

ಭಾರತೀಯ ಕಾವ್ಯ ವಿಮರ್ಶೆಯ ದಾರಿಯಲ್ಲಿ ಪ್ರಾಚೀನ ವಿಮರ್ಶೆಯ ವಿದ್ವಾಂಸರು ದೇವತೆಗಳ ಪ್ರಣಯದ ಕಥೆಗಳಲ್ಲಿ ಆಧ್ಯಾತ್ಮಿಕ ಭಾವ ವ್ಯಂಜನವನ್ನು ಹುಡುಕಿ ಹೇಳುವ ಸಂಪ್ರದಾಯದಲ್ಲಿರುವುದು ನಮಗೆ ತಿಳಿದಿರುವಾಗ, ಈ ಜಾಯಸಿಯವರ ಮಾನವ ಪ್ರಣಯದ ಕಥೆಯಲ್ಲಿ ಆಧ್ಯಾತ್ಮಿಕ ಭಾವ ವ್ಯಂಜನೆಯು ನಿರ್ಧಾರಿತವಾಗಿ ರೂಪಿತಗೊಂಡಿದೆ ಎಂಬುದು ಪ್ರಮುಖವಾಗಿ ಪರಿಗಣಿಸಬೇಕಾದ ಅಂಶ.

ಅಧ್ಯಾಯ ೭

ಮುಗಿಸುವ ಮುನ್ನ

ವೇದಗಳ ಕಾಲದಿಂದ ಶಂಕರಾಚಾರ್ಯರ ಕಾಲದವರೆಗೆ, ತಾವು ಆರಾಧಿಸುವ ದೇವರುಗಳನ್ನು ಹಾಡಿ ಹೊಗಳುವ ಸಂಪ್ರದಾಯಗಳು ಬರೇ ಸ್ತೋತ್ರ ಗೀತೆಗಳಿಂದ ಕಾವ್ಯ ಕಥನಗಳವರೆಗೆ ಬೆಳೆದು ಜನ ಸಾಮಾನ್ಯರಲ್ಲಿ ಭಕ್ತಿಯ ಬೀಜವನ್ನು ಬಿತ್ತಿದವು. ಇವುಗಳಲ್ಲಿ ಅಪಾರ ಸಂಖ್ಯೆಯಲ್ಲಿ ಕಾಣಸಿಗುವ ಈ ಸ್ತೋತ್ರ ರೂಪ ಭಕ್ತಿ ಸಾಹಿತ್ಯವು ಬೌದ್ಧ ಮತ್ತು ಜೈನ ಪರಂಪರೆಯಲ್ಲಿ ಕಂಡುಬರುತ್ತದೆ. ಅಶ್ವಘೋಷನ ಬುದ್ಧ ಚರಿತ, ಕಾಳಿದಾಸನ ಶ್ಯಾಮಲಾದಂಡಕ, ಬಾಣ-ದಂಡಿ-ಭರ್ತೃ ಹರಿ ಮುಂತಾದವರ ಶತಕಗಳು, ಶಂಕರರ ಮೋಹಮುದ್ಗರ– ಎಲ್ಲವೂ ಆತ್ಮದಿಂದ ಪರಮಾತ್ಮನನ್ನು ದೂರವಿಟ್ಟು, ಪರಮಾತ್ಮನಿಗೆ ಉನ್ನತ ಸ್ಥಾನಕೊಟ್ಟು ಆರಾಧಿಸುವ ಅನಿವಾರ್ಯತೆಯನ್ನು ಬೆಳೆಸುವತ್ತ ಕಾರ್ಯ ನಿರ್ವಹಿಸಿವೆ. ಈ ಸಂದರ್ಭದಲ್ಲಿಯೇ ಶಂಕರರ ಉಳಿದ ತತ್ವಬೋಧೀ ಗ್ರಂಥಗಳು ಬೇರೆಯಾಗಿ ನಿಂತು ಈ ಆತ್ಮ ಪರಮಾತ್ಮಗಳ ಅಂತರವನ್ನು ಅಳಿಸಿ ಅವುಗಳ ಏಕತ್ವವನ್ನು ಸಾರಿ ಭಕ್ತಿಯನ್ನು ಅನು ಭವದ ಗಳಿಕೆಯನ್ನಾಗಿಸಲು ಪ್ರಯತ್ನಿಸುತ್ತವೆ. ಆದರೆ ಸೈದ್ಧಾಂತಿಕ ಭಾರದಿಂದಾಗಿ ಅವುಗಳು ಜನಸಾಮಾನ್ಯರಲ್ಲಿ ಪ್ರಭಾವ ಬೀರುವಲ್ಲಿ ಸೋಲುತ್ತವೆ. ಶಂಕರರ ನಂತರದ ಜನ ಶಂಕರರನ್ನೇ ಔನ್ನತ್ಯಕ್ಕೇರಿಸಿ

ತಮ್ಮ ಮತ್ತು ಶಂಕರರ ನಡುವೆ ದೂರವನ್ನು ಸೃಷ್ಟಿಸಿಕೊಂಡರು. ಇಂತಹ ಗೌರವ ಮತ್ತು ಭಕ್ತಿ— ಸಾಮಾನ್ಯ ಜನರಲ್ಲಿ, ತಮ್ಮ ಆತ್ಮ ಪರಿಶುದ್ಧತೆಯನ್ನು ಕಾಣುವಲ್ಲಿ ಭಯವನ್ನುಂಟು ಮಾಡಿ ಅವರನ್ನು ತಲೆಬಾಗುವಂತೆ ಮಾಡುತ್ತಿದ್ದವು. ಜೀವನದ ಅನಿತ್ಯ ಮತ್ತು ಮೃತ್ಯು ಇವುಗಳ ಬಗೆಗಿನ ಭಯದ ಕಾರಣ ಇವರುಗಳು ಆತ್ಮವಿದ್ಯೆಯನ್ನು ತಿಳಿಯುವುದರಲ್ಲಿ ಆಸಕ್ತರಾದರು. ಜಗತ್ತಿನ ಪ್ರಿಯ, ಅಪ್ರಿಯ ವಸ್ತುಗಳು ನಾಶಹೊಂದುತ್ತವೆ, ಸುಖ-ದುಃಖ, ಬದುಕು ಎಲ್ಲವೂ ಅನಿತ್ಯ ಎಂದು ತಿಳಿದ ಇವರುಗಳು ತಮ್ಮಲ್ಲೇ ಇರುವ ಒಂದು ಅಗೋಚರ ನಿತ್ಯತೆಯನ್ನು ಕಂಡುಕೊಳ್ಳಲು ಪ್ರಯತ್ನ ನಡೆಸಿದರು. ಸಾಮಾಜಿಕ ಸಂಬಂಧಗಳ ಸಂದರ್ಭಗಳಲ್ಲಿನ ರಾಜ್ಯ ಶಕ್ತಿಯ ದಬಾವಣೆಯೂ ಇಂಥ ಅನಿವಾರ್ಯತೆಯನ್ನು ಕಲ್ಪಿಸಿತು. ರಾಜ್ಯಶಕ್ತಿಯು ತನ್ನ ಅಸ್ತಿತ್ವಕ್ಕಾಗಿ ಶಾಸಕನ ರೂಪದಲ್ಲಿ ಈಶ್ವರನ ಕಲ್ಪನೆಯನ್ನು ಮಾಡಿ ಶಾಸನಗಳನ್ನು ಧಾರ್ಮಿಕ ಹಾಗೂ ಆಧ್ಯಾತ್ಮಿಕತೆಯ ನಿಯಮಗಳಾಗಿ ಹೇರತೊಡಗಿತು. ಇವುಗಳಿಂದ ಅಂಜಿದ ಸಾಮಾನ್ಯ ಪ್ರಜೆಗಳು ತಮ್ಮಲ್ಲೇ ದೇವರನ್ನು ಹಾಗೂ ಮೋಕ್ಷ ಸಾಧನೆಯನ್ನು ಕಾಣಲು ತವಕಿಸಿದರು.

ಹೀಗೆ ಭಾರತ ಧಾರ್ಮಿಕವಾಗಿ ಹೊರಳು ಸ್ಥಿತಿಯಲ್ಲಿರುವಾಗಲೇ ಸೂಫೀಗಳು ಭಾರತಕ್ಕೆ ಬಂದರು. ಅವರು ತಮ್ಮ ಮಾತೃಧರ್ಮವಾದ ಇಸ್ಲಾಂ ಧರ್ಮವನ್ನು ಬೋಧಿಸಿ–ಪ್ರಚಾರ ಮಾಡುವ ಸಲುವಾಗಿ ಗೀತೆ, ಕಥನಗಳ ಮುಖಾಂತರ ಜನರನ್ನು ಮುಟ್ಟುತ್ತಿದ್ದರು. ಅವರುಗಳು ಭಾರತದಲ್ಲಿ ಪ್ರಾರಂಭದಲ್ಲಿ ಪ್ರಭಾವಶಾಲಿಗಳಾಗದಿರಲು ಪ್ರಮುಖವಾದ ಕಾರಣ ಹಿಂದೂ-ಜೈನ-ಬೌದ್ಧ ಧರ್ಮದ ಪರಂಪರಾನುಗತವಾದ ನಂಬಿಕೆ ನಡವಳಿಕೆಗಳು ಮೂಡಿಸಿದ ಭಯವೇ ಆಗಿದ್ದಿತು. ಹಾಗಾಗಿ ಈ ಬುದ್ಧಿವಂತ ಸೂಫೀ ಸಂತರು ಭಾರತೀಯ ನೆಲದ ಕಥೆಗಳನ್ನು ಆಯ್ದುಕೊಂಡು ತಮ್ಮ ಮತಪ್ರಚಾರದಲ್ಲಿ ತೊಡಗಿದರು. ಅವರು

ಭಾರತೀಯ ಧರ್ಮ ಸಂಸ್ಕೃತಿ ವೇದ-ಪುರಾಣ-ಉಪನಿಷತ್ತು ಇವುಗಳನ್ನು ಕಲಿತರು. ಇದೇ ವೇಳೆಯಲ್ಲಿ ಭಾರತೀಯ ರಾಜಕೀಯ ಅಧಿಕಾರವು ಮುಸಲ್ಮಾನರ ಕೈ ಸೇರುತ್ತಿತ್ತು. ಹಿಂದೂ ಜನಗಳಿಗೆ ಒದಗಿಬಂದ ಮುಸಲ್ಮಾನರ ಆಡಳಿತ ಬಹಳ ಕಾಲದವರೆಗೆ ಸಾಮಾಜಿಕ ಅಸ್ಥಿರತೆಯನ್ನು ಉಂಟುಮಾಡಿತು. ಆಗ ಈ ಸೂಫೀ ಸಂತರು ಹಿಂದೂ ಮುಸಲ್ಮಾನರ ಐಕ್ಯಮತ್ಯವನ್ನು ಸ್ಥಾಪಿಸುವ ಸಲುವಾಗಿ ಕಥನ ಗೀತೆಗಳನ್ನು ಹಾಡಿ-ಬರೆದು ಖ್ಯಾತರಾದರು. ಈ ಸೂಫೀ ಸಂತರ ಕಾವ್ಯಗಳು ಭಾರತೀಯ ಸಂಸ್ಕೃತಿ ಮತ್ತು ಧಾರ್ಮಿಕ ನಡುವಳಿಕೆಯಲ್ಲಿಯೇ ಹೊಸತನವನ್ನು ಮೂಡಿಸಲು ಸಹಾಯ ಮಾಡಿದವು. ಬಹುಶಃ, ಈ ಸೂಫೀ ಸಂತರು ಭಾರತಕ್ಕೆ ಬರದಿದ್ದರೆ— ಭಾರತೀಯ ಇತಿಹಾಸದಲ್ಲಿ ಪ್ರಮುಖ ಸಾಂಸ್ಕೃತಿಕ - ಹೊರಳಿಗೆ ಕಾರಣವಾದ ಆತ್ಮ ಜ್ಞಾನ ಪ್ರಧಾನ ಭಕ್ತಿ ಪಂಥದ ಹುಟ್ಟು ಸಾಧ್ಯವಿರಲಿಲ್ಲವೇನೋ ಎನಿಸುತ್ತದೆ. ಏಕೆಂದರೆ ಶಂಕರರವರೆಗೂ ಇದ್ದ ಪರಮಾತ್ಮನ ವೈಭವೀಕರಣ ಮತ್ತು ಸಾಂಸ್ಕೃತಿಕವಾಗಿ ಜನರ ನಡುವಿನ ಅಂತರ ಇವುಗಳೇ ಗಾಢವಾಗುತ್ತಿದ್ದವೋ ಏನೋ.

ಕೊನೆಯದಾಗಿ ಇಷ್ಟು ಹೇಳಬಹುದು—ಭಾರತೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಹೊರಳನ್ನು—ತಿರುವನ್ನು ಕೊಟ್ಟ ಸೂಫೀ ಸಂತರಲ್ಲಿ ಮಲ್ಲಿಕ್ ಮುಹಮ್ಮದ್ ಜಾಯುಸಿಯವರು ತಮ್ಮ ಅನುಭವ ಜ್ಞಾನದಿಂದಲೇ ಅನುಭಾವದ ಜ್ಯೋತಿ ಹರಡುವ ಸಂತರಾದರು. ಇವರು ಬರೇ ಸಾಂಸ್ಕೃತಿಕ ಸಂದರ್ಭದ ಪ್ರಚೋದಕರಷ್ಟೇ ಅಲ್ಲ ಖಂಡಿತವಾಗಿ ನಿಜವಾದ ಅರ್ಥದಲ್ಲಿ ಕವಿಗಳಾಗಿದ್ದರು.

ಗ್ರಂಥ ಋಣ

೧. ಜಾಯಸಿ ಗ್ರಂಥಾವಳಿ (ಸಟೀಕ)

ಡಾ. ಶ್ರೀನಿವಾಸಶರ್ಮ

೨. ಹಿಂದೀ ಸೂಫೀ ಕವಿ ಔರ್ ಕಾವ್ಯ.

ಡಾ. ಸರಲಾ ಶುಕ್ಲ

೩. Living Sufism

Seyyed Hossein Nasr

೪. ಸೂಫಿ ಮತ್ತು ಶರಣರ ಅನುಭಾವ ಪಥ

ಪಂ. ಶ್ರೀ ಷಣ್ಮುಖಯ್ಯ ಅಕ್ಕೂರಮಠ

೫. ತಸವ್ವುಫ್ ಅಥವಾ ಸೂಫೀ ಮತ್

ಶ್ರೀ ಚಂದ್ರಬಲೀ ಪಾಂಡೇಯ

೬. ಹಿಂದೀ ಸಾಹಿತ್ಯಕಾ ಆಲೋಚನಾತ್ಮಕ್ ಇತಿಹಾಸ್

ಡಾ. ರಾಮಕುಮಾರ್‌ವರ್ಮ

೭. ಮಧ್ಯಕಾಲೀನ ಧರ್ಮ ಸಾಧನಾ

ಆಚಾರ್ಯ ಹಜಾರಿಪ್ರಸಾದ್ ದ್ವಿವೇದಿ

೮. Influence of Islam on Indian Culture

Dr. Tarachand

೯. ಜಾಯಸಿ ಏಕ್ ನಯೀ ದೃಷ್ಟಿ

ರಘುವಂಶ್

೧೦. ಸಂಕ್ಷಿಪ್ತ ಪದಮಾವತ್

ಶ್ಯಾಂಸುಂದರದಾಸ್ ಮತ್ತು ಸತ್ಯಜೀವನ್‌ವರ್ಮ



ಸಾಮಾಜಿಕ ಚಿಂತನ ಮಾಲೆ